ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಕೆನಡಾ ತಂಡದ ಆರಂಭಿಕ ಬ್ಯಾಟರ್ 19 ವರ್ಷದ ಯುವರಾಜ್ ಸಾಮ್ರಾ ಟಿ-20 ವಿಶ್ವಕಪ್‌ನಲ್ಲಿ ಹೊಸ ದಾಖಲೆ ಬರೆದಿದ್ದಾರೆ. ಬಲಿಷ್ಠ ನ್ಯೂಜಿಲೆಂಡ್ ತಂಡದ ವಿರುದ್ಧ ಲೀಗ್ ಹಂತದ ಪಂದ್ಯದಲ್ಲಿ 58 ಎಸೆತಗಳಲ್ಲಿ ಆಕರ್ಷಕ ಶತಕ (110) ಸಿಡಿಸಿ ಮಿಂಚಿದ್ದಾರೆ.

18 ಫೆಬ್ರವರಿ 2026 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 334 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಧನ ರೇಖೆ ಇಲ್ಲದ ಅಂಗೈ... ಬಡತನ ಇಲ್ಲದ ಜೀವನ... » 2



ಹಾಲು ಉತ್ಪಾದನೆಯಲ್ಲಿ ಚ.ರಾ.ಪ. ತಾಲ್ಲೂಕು 4ನೇ ಸ್ಥಾನ » 3



ಕೋಲಾರದಲ್ಲಿ ದೇಶದ ಮೊದಲ ಹೆಲಿಕಾಪ್ಟರ್ ಘಟಕ » 4

## ಇಂದು ನಶಾ ಮುಕ್ತ ಕ್ಯಾಂಪಸ್, ಅಂಗಾಂಗ ದಾನ ಜಾಥಾ

• ಪ್ರಜೋದಯ ವರದಿ

**ಹಾಸನ :** ಜಿಲ್ಲಾ ಹಾಕಿ ಕ್ರೀಡಾಂಗಣದಲ್ಲಿ ಫೆ.18 ರಂದು ಬೆಳಗ್ಗೆ 7 ಗಂಟೆಗೆ ನಶಾ ಮುಕ್ತ ಭಾರತ, ನಶಾ ಮುಕ್ತ ಕರ್ನಾಟಕ, ನಶಾ ಮುಕ್ತ ಕ್ಯಾಂಪಸ್, ಅಂಗಾಂಗ ದಾನ ಅಭಿಯಾನ ಮತ್ತು ಜಾಥಾ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಭಗವಾನ್ ಬಿ.ಸಿ ದಿಕ್ಸೂಚಿ ಭಾಷಣ ಮತ್ತು ಪ್ರತಿಜ್ಞಾ ವಿಧಿ ಬೋಧಿಸಲಿದ್ದಾರೆ. ಕರ್ನಾಟಕ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರೂ ಆದ ಶಾಸಕ ಕೆ.ಎಂ. ಶಿವಲಿಂಗೇಗೌಡ ಗೌರವ ಉಪಸ್ಥಿತಿ ವಹಿಸಲಿದ್ದು, ಶಾಸಕ ಹೆಚ್.ಪಿ.ಸ್ವರೂಪ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ. ಪಟೇಲ್, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಶಾಸಕರಾದ ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರು ಮುಂತಾದವರು ಭಾಗವಹಿಸಲಿದ್ದಾರೆ.

# ಸಮಯ ಬಂದಾಗ ಜನತೆಗೆ ಸಿ.ಎಂ. ಸಂದೇಶ

## ನಾಯಕತ್ವ ಬದಲಾವಣೆ ಗುಟ್ಟಿನ ವ್ಯವಹಾರವಲ್ಲ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

• ಪ್ರಜೋದಯ ವರದಿ

**ಬೆಂಗಳೂರು:** ನಾಯಕತ್ವ ವಿಚಾರ ಕದ್ದುಮುಚ್ಚಿ ಮಾಡಿಕೊಂಡಿರುವ ಗುಟ್ಟಿನ ವ್ಯವಹಾರವಲ್ಲ. ಸಿದ್ದರಾಮಯ್ಯ ಅವರೇ ಸಮಯ ಬಂದಾಗ ರಾಜ್ಯದ ಜನರಿಗೆ ಸಂದೇಶ ನೀಡುತ್ತಾರೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಹೇಳಿರುವಂತೆ ನಾನು, ಸಿದ್ದರಾಮಯ್ಯ ಅವರು ಹಾಗು ಹೈಕಮಾಂಡ್ ಎಲ್ಲರೂ ಸೇರಿ ತೀರ್ಮಾನ ತೆಗೆದುಕೊಂಡಿದ್ದೇವೆ. ಆ ತೀರ್ಮಾನ ಏನೆಂಬುದು ಸಮಯ ಬಂದಾಗ ತಿಳಿಯುತ್ತದೆ ಎಂದರು.

ಸಚಿವ ಹೆಚ್.ಸಿ.ಮಹದೇವಪ್ಪ ಅವರು ಅಧಿಕಾರ ಹಂಚಿಕೆ ವಿಚಾರವಾಗಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿ, ಮಹದೇವಪ್ಪ ಅವರು ಬಹಳ ದೊಡ್ಡವರು. ಈಗ ಅವರೂ ನಮ್ಮ ಹೈಕಮಾಂಡ್ ಭಾಗವಾಗಿದ್ದಾರೆ. ಅವರ ಬಗ್ಗೆ ನಾನು ಏನನ್ನೂ ಮಾತನಾಡುವುದಿಲ್ಲ. ಈ ಬಗ್ಗೆ ಪಕ್ಷವೇ ತೀರ್ಮಾನ ಮಾಡಲಿ.



ನಾಯಕರ ಹೇಳಿಕೆ ಬಗ್ಗೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗು ಹೈಕಮಾಂಡ್‌ನವರು ಕ್ರಮ ಕೈಗೊಳ್ಳುತ್ತಾರೆ. ನಾನು ಮಹದೇವಪ್ಪನಿಗೆ ಹಾಗು ಬೇರೆಯವರಿಗೆ ಉತ್ತರ ನೀಡಲು ತಯಾರಿಲ್ಲವೆಂದು ಹೇಳಿದರು.

### ಬಿಜೆಪಿ ಆರ್‌ಎಸ್‌ಎಸ್ ಕಚೇರಿಗೆ ಭೂಮಿ ಕೊಟ್ಟಿಲ್ಲವೇ

ಕಾಂಗ್ರೆಸ್ ಭವನಗಳಿಗೆ ಸರ್ಕಾರಿ ಜಮೀನು ಬಳಸಿಕೊಳ್ಳಲಾಗುತ್ತಿದೆ ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿ, ನಾವು ಕಾಂಗ್ರೆಸ್ ಭವನಗಳಿಗೆ ಸರ್ಕಾರಿ ಜಾಗ ಬಳಸಿಕೊಳ್ಳುತ್ತಿದ್ದೇವೆ. ಮಹಾತ್ಮಾ ಗಾಂಧಿಜಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷತೆಯ ಶತಮಾನೋತ್ಸವ ಹಿನ್ನಲೆ 100 ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಮುಂದಾಗಿದ್ದೇವೆ. ನಾವು 5-10 ಸಾವಿರ ಚದರ ಅಡಿಗಳಷ್ಟು ಜಾಗವನ್ನು ಮಂಜೂರು ಮಾಡುತ್ತಿದ್ದೇವೆ. ಬಿಜೆಪಿ ಆಡಳಿತ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ 100ಕ್ಕೂ ಹೆಚ್ಚು ಕಡೆಗಳಲ್ಲಿ ವಿವಿಧ ಟ್ರಸ್ಟ್ ಗಳ ಹೆಸರಿನಲ್ಲಿ ಜಾಗ ಪಡೆದಿದ್ದಾರೆಂದು ಹೇಳಿದರು.

ಚಾಣಾಕ್ಯ ವಿವಿಗೆ ನೀಡಿರುವ ಜಾಗ ಪ್ರತಿ ಎಕರೆಗೆ 10 ಕೋಟಿ ರೂಪಾಯಿ ಬೆಲೆ ಬಾಳುತ್ತದೆ. ಆದರೆ, ಬಿಜೆಪಿಯವರು ಪ್ರತಿ ಎಕರೆಗೆ 50 ಲಕ್ಷದ ದರದಲ್ಲಿ 100 ಎಕರೆ ಜಾಗ ಮಂಜೂರು ಮಾಡಿದ್ದು, ಸಿಎಸ್‌ಆರ್ ನಿಧಿ ಮೂಲಕ ಕೋಟ್ಯಂತರ ರೂಪಾಯಿ ಸಂಗ್ರಹಿಸಿದ್ದಾರೆ. ಅವರು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದರು. ಬಿಜೆಪಿ ಜಾಗ ಮಂಜೂರು ಮಾಡದೇ, ಆರ್‌ಎಸ್‌ಎಸ್ ಕಚೇರಿ ಹೇಗೆ ನಿರ್ಮಾಣವಾಯಿತು. ಸದಾಶಿವನಗರದಲ್ಲಿ ನಮ್ಮ ಮನೆಯ ಪಕ್ಕದಲ್ಲಿರುವ ಪಾರ್ಕ್‌ನ್ನು ವೆಲ್‌ನೆಸ್ ಸೆಂಟರ್‌ನ ಯೋಗಾ ಕಚೇರಿಗೆ ನೀಡಿದ್ದು, ಕಚೇರಿ ಕಟ್ಟಿಕೊಂಡಿದ್ದಾರೆ. ಇಂತಹ ನೂರಾರು ಉದಾಹರಣೆಗಳನ್ನು ನಾನು ನೀಡಬಲ್ಲೆ. ಅವರು ನಮಗೆ ಬೋಧನೆ ಮಾಡುವ ಅಗತ್ಯವಿಲ್ಲ. ಅವರು ಏನಾದರೂ ಆರೋಪ ಮಾಡಿಕೊಳ್ಳಲಿ. ನಾವು ನಮ್ಮ ಪಕ್ಷದ ದೇವಾಲಯವನ್ನು ಕಟ್ಟಲು ಈ ತೀರ್ಮಾನಕ್ಕೆ ಬಂದಿದ್ದೇವೆ. ಇದು ನಮ್ಮ ಕರ್ತವ್ಯ. ನಾನು ಇದನ್ನು ಮಾಡಿಯೇ ಮಾಡುತ್ತೇನೆ. ಎಲ್ಲಾ ಮಾನದಂಡಗಳು, ಅರ್ಹತೆ ಆಧಾರದ ಮೇಲೆ ನಾವು ಈ ಜಾಗವನ್ನು ಮಂಜೂರು ಮಾಡುತ್ತಿದ್ದೇವೆ. ಈ ಬಗ್ಗೆ ಯಾರಾದರೂ ನ್ಯಾಯಾಲಯದ ಮೆಟ್ಟಿಲೇರುವುದಾದರೆ ಹತ್ತಲಿ ಎಂದರು.

### ಶಾಸಕರ ವಿದೇಶ ಪ್ರವಾಸ ಗೊತ್ತಿಲ್ಲ

ಶಾಸಕರ ವಿದೇಶ ಪ್ರವಾಸದ ಬಗ್ಗೆ ಕೇಳಿದಾಗ, ನನಗೆ ಯಾವ ಪ್ರವಾಸದ ಬಗ್ಗೆ ಮಾಹಿತಿ ಇಲ್ಲ. ಈ ಬಗ್ಗೆ ನನಗೆ ಮಾಧ್ಯಮಗಳಿಂದಷ್ಟೇ ತಿಳಿದಿದೆ. ಇದು ಅವರ ವೈಯಕ್ತಿಕ ಪ್ರವಾಸವೋ, ಬೇರೆಯವರು ಅವರನ್ನು ಪ್ರವಾಸಕ್ಕೆ ಕಳುಹಿಸುತ್ತಿದ್ದಾರೋ ಗೊತ್ತಿಲ್ಲ. ಇದು ಪ್ರವಾಸ ಕಳುಹಿಸುತ್ತಿರುವವರು ಉಂಟು ಹಾಗು ಪ್ರವಾಸ ಹೋಗುತ್ತಿರುವವರು ಉಂಟು. ಪಕ್ಷದ ಅಧ್ಯಕ್ಷನಾಗಿ ನಾನು ಇದರಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದು ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

### ನಾಯಕತ್ವ ವಿಚಾರ ಮಾತನಾಡಲ್ಲ: ಯತೀಂದ್ರ

ನಾಯಕತ್ವ ಬದಲಾವಣೆ ವಿಚಾರದಲ್ಲಿ ಯಾವುದೇ ಹೇಳಿಕೆ ನೀಡುವುದಿಲ್ಲ. ನವೆಂಬರ್ ತಿಂಗಳಿನಿಂದ ನಾನು ಎಲ್ಲವನ್ನೂ ಹೇಳಿ ಬಿಟ್ಟಿದ್ದೀನಿ. ಇನ್ನು ಈ ವಿಚಾರದಲ್ಲಿ ಏನೂ ಹೇಳುವುದಿಲ್ಲ, ಯಾರ ಹೇಳಿಕೆಗೂ ಪ್ರತಿಕ್ರಿಯೆ ನೀಡುವುದಿಲ್ಲ. ನಾನು ಹೇಳುವುದು ಹೇಳಿಯಾಗಿದೆ. ಇನ್ನು ಮುಂದೆ ಈ ವಿಚಾರವನ್ನು ನನ್ನ ಮುಂದೆ ತರಬೇಡಿ ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರು ಹೇಳಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ಹಿನ್ನಲೆ ಈ ನಿರ್ಧಾರಕ್ಕೆ ಬಂದಿರುವಂತೆ ಕಾಣುತ್ತಿದೆ.

## ಸೂರಜ್ ರೇವಣ್ಣ ಮರು ಪರಿಶೀಲನಾ ಅರ್ಜಿ ವಜಾ



• ಪ್ರಜೋದಯ ವರದಿ

**ಬೆಂಗಳೂರು:** ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ಅವರ ವಿರುದ್ಧದ ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಿಂದ ಕೈಬಿಡುವಂತೆ ಕೋರಿದ್ದ ಮರು ಪರಿಶೀಲನಾ ಅರ್ಜಿಯನ್ನು ಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಜಾ ಮಾಡಿದೆ.

ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಿಂದ ತಮ್ಮನ್ನು ಕೈಬಿಡುವಂತೆ ಕೋರಿ ಸೂರಜ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಗೊಂಡಿದ್ದರು.

# ಕಟ್ಟಿನಕೆರೆ ಮಾರುಕಟ್ಟೆ ಒತ್ತುವರಿ ತೆರವು

• ಪ್ರಜೋದಯ ವರದಿ

**ಹಾಸನ:** ನಗರದ ಕಟ್ಟಿನಕೆರೆ ಮಾರುಕಟ್ಟೆಯಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ಮಂಗಳವಾರ ಮಹಾನಗರ ಪಾಲಿಕೆ ಪರಿಸರ ಇಂಜಿನೀಯರ್ ಕವಿತಾ ಅವರ ನೇತೃತ್ವದಲ್ಲಿ ನಡೆಯಿತು.

ಮಾರುಕಟ್ಟೆಯ ಮುಖ್ಯ ರಸ್ತೆಗಳನ್ನು ಅತಿಕ್ರಮಿಸಿಕೊಂಡು ವರ್ತಕರು ವಹಿವಾಟು ನಡೆಸುತ್ತಿದ್ದರು. ಇದರಿಂದ ವಾಹನಗಳು ತೆರಳಲು ಪರದಾಡುತ್ತಿದ್ದರು. ನೆರಳಿನ ಆಶ್ರಯಕ್ಕಾಗಿ ವ್ಯಾಪಾರಿಗಳು ಕಟ್ಟುತ್ತಿದ್ದ ಶೀಟ್‌ಗಳು ಸಹ ಅಡ್ಡಿಯುಂಟು ಮಾಡಿದ್ದವು. ಈ ಸಂಬಂಧ 15 ದಿನಗಳ ಹಿಂದೆಯೇ ಪಾಲಿಕೆ ಅಧಿಕಾರಿಗಳು ಒತ್ತುವರಿ ತೆರವುಗೊಳಿಸುವಂತೆ ವ್ಯಾಪಾರಿಗಳಿಗೆ ಸೂಚಿಸಿದ್ದರು. ಒಂದು ವಾರದೊಳಗೆ ರಸ್ತೆ ಜಾಗ ಬಿಟ್ಟುಕೊಡದಿದ್ದರೆ ಜೆಸಿಬಿ ನೆರವಿನಿಂದ ಅತಿಕ್ರಮಣ ತೆರವುಗೊಳಿಸುವ ಎಚ್ಚರಿಕೆ ನೀಡಲಾಗಿತ್ತು.

15 ದಿನ ಸಮಯ ಕೊಟ್ಟರೂ ವರ್ತಕರು ಸ್ಪಂದಿಸದ ಹಿನ್ನಲೆಯಲ್ಲಿ ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಜೆಸಿಬಿಯೊಂದಿಗೆ ಬಂದ ಅಧಿಕಾರಿ ಹಾಗು ಸಿಬ್ಬಂದಿ ರಸ್ತೆ ಬದಿಯಲ್ಲಿಟ್ಟಿದ್ದ ಸಾಮಾಗ್ರಿಗಳನ್ನು ತೆರವುಗೊಳಿಸುವಂತೆ ಸೂಚಿಸಿದರು. ನಂತರ ಜೆಸಿಬಿ ಮೂಲಕ ಅಂಗಡಿಗಳ ತೆರವು ಕಾರ್ಯಾಚರಣೆ ನಡೆಯಿತು. ಮೊದಲೇ ಸೂಚನೆ ನೀಡಿದ್ದರಿಂದ ಹಾಗು ಸಾರ್ವಜನಿಕರು ತೆರವು ಕಾರ್ಯಾಚರಣೆಗೆ ಸಹಮತ ವ್ಯಕ್ತಪಡಿಸಿದ್ದರಿಂದ ವ್ಯಾಪಾರಿಗಳು ಸಹ

» ನಾಲ್ಕನೇ ಪುಟದಲ್ಲಿ



### ಪ್ಲಾಸ್ಟಿಕ್ ಬಳಸದಂತೆ ಎಚ್ಚರಿಕೆ

ಮಾರುಕಟ್ಟೆಯ ಬಾರ್‌ವೊಂದರಲ್ಲಿ ಪ್ಲಾಸ್ಟಿಕ್ ಗ್ಲಾಸ್ ಹಾಗು ಪ್ಲೇಟ್‌ಗಳನ್ನು ವಶಕ್ಕೆ ಪಡೆದ ಇಂಜಿನೀಯರ್ ಕವಿತಾ ಅವರು ಇದೇ ದುರ್ವರ್ತನೆ ಮುಂದುವರಿಸಿದರೆ ಪ್ರಕರಣ ದಾಖಲಿಸ ಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

ಪ್ಲಾಸ್ಟಿಕ್ ಬಳಸದಂತೆ ಅನೇಕ ಬಾರಿ ಹೇಳಿದರೂ ತಲೆ ಕೆಡಿಸಿಕೊಳ್ಳುತ್ತಿಲ್ಲ. ಲಾಭದ ದೃಷ್ಟಿಯಿಂದಲೇ ಎಲ್ಲವನ್ನೂ ನೋಡುವ ಬದಲು ಪರಿಸರಕ್ಕೂ ಆದ್ಯತೆ ನೀಡಬೇಕು. ಇಷ್ಟೊಂದು ಪ್ಲಾಸ್ಟಿಕ್ ಸಂಗ್ರಹಿಸಿಟ್ಟುಕೊಳ್ಳಲು ನಿಮಗೆ ಅನುಮತಿ ನೀಡಿದವರು ಯಾರೆಂದು ತರಾಟೆಗೆ ತೆಗೆದುಕೊಂಡರು.

# ಬಾಲ್ಯ ವಿವಾಹ ತಡೆಗೆ ಎಲ್ಲರೂ ಕಂಕಣ ಬದ್ಧರಾಗಿ

## ಜಿ.ಪಂ. ಸಿಇಓ ಬಿ.ಆರ್. ಪೂರ್ಣಿಮಾ ಸಲಹೆ | ಪಿಡಿಓಗಳಿಗೆ ಒಂದು ದಿನದ ಕಾರ್ಯಾಗಾರ

• ಪ್ರಜೋದಯ ವರದಿ

**ಹಾಸನ:** ಕಾನೂನು ಎಷ್ಟೇ ಬಿಗಿಯಾದರೂ ಗ್ರಾಮೀಣ ಭಾಗದಲ್ಲಿ ಬಾಲ್ಯ ವಿವಾಹ ಪ್ರಕರಣಗಳು ವರದಿಯಾಗುತ್ತಲೇ ಇರುವುದು ಆತಂಕದ ಸಂಗತಿಯಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಅನಿಷ್ಟ ಪದ್ಧತಿ ತಡೆಗೆ ಕಂಕಣಬದ್ಧರಾಗಿ ಕೆಲಸ ಮಾಡಬೇಕೆಂದು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಅವರು ಸಲಹೆ ನೀಡಿದರು.

ಮಂಗಳವಾರ ನಗರದ ಡಾ. ಬಿ. ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಬಾಲ್ಯ ವಿವಾಹ ಮುಕ್ತ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಅರಿವು ಮತ್ತು ಕಾರ್ಯಾಗಾರ ಉದ್ಘಾಟಿಸಿ ಮಾತನಾ ಡಿದ ಅವರು, ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹ ಹಾಗು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣ ಹೆಚ್ಚುತ್ತಿರುವುದು ಆತಂಕ ಹುಟ್ಟಿಸಿದೆ. ಗ್ರಾಮ ಮಟ್ಟದಲ್ಲೇ ಜಾಗೃತಿ ಮೂಡಿಸುವ ಜವಾಬ್ದಾರಿ ಪಂಚಾಯಿತಿ ಅಭಿವೃದ್ಧಿ



ಅಧಿಕಾರಿಗಳ ಮೇಲಿದೆ ಎಂದರು.

ಶಾಲೆ, ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮ, ಗ್ರಾಮಸಭೆ, ಮಕ್ಕಳ ಗ್ರಾಮಸಭೆ ಹಾಗು ಸಂವಾದ ಕಾರ್ಯಕ್ರಮಗಳನ್ನು ಹೆಚ್ಚಿಸಬೇಕು. ಬಾಲ್ಯ ವಿವಾಹ ನಿಷೇಧ ಕಾಯ್ದೆ, ಬಾಲ ನ್ಯಾಯ ಕಾಯ್ದೆ, ಮಕ್ಕಳ ಹಕ್ಕುಗಳು ಮತ್ತು ಪೋಕ್ಸೋ ಕಾನೂನು ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು. ಹದಿಹರೆಯದ ವಯಸ್ಸಿನಲ್ಲಿ ಯುವಕ ಹಾಗು ಯುವತಿಯರು ಆಕರ್ಷಣೆಗೆ ಒಳಗಾಗಿ ಪ್ರೀತಿಯ ಹೆಸರಿನಲ್ಲಿ ಜೀವನ ಹಾಳು ಮಾಡಿಕೊಳ್ಳುತ್ತಾರೆ. ಓದುವ ಸಮಯದಲ್ಲಿ ಬೇಡದ ವಿಚಾರಕ್ಕೆ ಹೆಚ್ಚಿನ ಆದ್ಯತೆ ನೀಡಿ ಭವಿಷ್ಯವನ್ನೇ ಡೋಲಾಯಮಾನ ಮಾಡಿಕೊಳ್ಳುತ್ತಾರೆ. ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿರುವುದು ಕಳವಳಕಾರಿ ಸಂಗತಿ ಎಂದರು.

ಕಾನೂನು ಅರಿವಿಲ್ಲದೆ ಪ್ರೀತಿ, ಪ್ರೇಮದ ಹೆಸರಿನಲ್ಲಿ ಮನೆ ಬಿಟ್ಟು ಹೋಗುವುದು, ದೈಹಿಕ ಸಂಪರ್ಕ ಹೊಂದುವುದು ಮುಂತಾದ ಘಟನೆಗಳು ನಡೆಯುತ್ತಿವೆ. ಅದರಿಂದ ಬಾಲ್ಯ ವಿವಾಹ, ಪೋಕ್ಸೋ ಪ್ರಕರಣ ಹಾಗು ಬಾಲ ಗರ್ಭಿಣಿಯರ ಸಂಖ್ಯೆ ಹೆಚ್ಚುತ್ತಿದೆ. ಯುವಕ- ಯುವತಿಯರಿಗೆ ಕಾನೂನು ತಿಳವಳಿಕೆ ನೀಡುವುದು ತುರ್ತು ಅಗತ್ಯವಾಗಿದೆ ಎಂದು ತಿಳಿಸಿದರು.

ವಿದ್ಯಾವಂತರೇ ತಪ್ಪು ಮಾಡುತ್ತಿರುವುದು ದುರಂತ. ಮನೆಯಲ್ಲಿ ಪೋಷಕರು ಹಾಗು ಶಾಲೆಯಲ್ಲಿ ಶಿಕ್ಷಕರು ಈ ಬಗ್ಗೆ ಎಚ್ಚರ ವಹಿಸಬೇಕು. ಹೆಣ್ಣು ಮಕ್ಕಳಿಗೆ ಸ್ವಯಂ ರಕ್ಷಣೆಯ ಜಾಗೃತಿ ಮೂಡಿಸಬೇಕು. ಬಾಲ್ಯ ವಿವಾಹವಾದರೆ ಒಂದು ಹೆಣ್ಣಿನ ಬಾಳನ್ನು ನಾಶ ಮಾಡಿದಂತಾಗುತ್ತದೆ. ವಿದ್ಯಾಭ್ಯಾಸ, ಆಟೋಟಗಳ ಮೂಲಕ ಇನ್ನೂ ಬೆಳೆಯುವ ಹಂತದಲ್ಲಿರುವ ಮಕ್ಕಳಿಗೆ ಮದುವೆ ಯಂತಹ ದೊಡ್ಡ ಭಾರ ಹೊರಿಸುವುದು ಅಕ್ಷಮ್ಯ. ಬಡತನ, ಅನಕ್ಷರತೆ, ಮೌಢ್ಯ ಹೀಗೆ ನಾನಾ ಕಾರಣಗಳಿಂದ ಬಾಲ್ಯ ವಿವಾಹಗಳು ನಡೆಯುತ್ತಿವೆ. ಯಾರಿಗೂ ಗೊತ್ತಾಗಬಾರದೆಂದು ರಾತ್ರೋ ರಾತ್ರಿ ಮದುವೆ ಮಾಡುವ ಪ್ರಸಂಗಗಳನ್ನು ನಾವು ನೋಡಿದ್ದೇವೆ. ಗ್ರಾಮ ಮಟ್ಟದಲ್ಲಿ ಇಂತಹ ಪರಿಸ್ಥಿತಿ ಕಂಡುಬಂದರೆ ತಕ್ಷಣ ಪಿಡಿಓಗಳು ಕ್ರಮ ವಹಿಸಬೇಕು. ಸ್ವಸ್ಥ ಸಮಾಜ ನಿರ್ಮಾಣದಲ್ಲಿ ಅವರ ಪಾತ್ರ ಹೆಚ್ಚಿದೆ ಎಂದು ಸಲಹೆ ನೀಡಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕೆ.ಜಿ.ದಿಲೀಪ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಮಕ್ಕಳ ಸಂರಕ್ಷಣೆಗೆ ವಿಶೇಷ ನಿಗಾ ವಹಿಸಲಾಗಿದೆ. ಮಕ್ಕಳ ಸಹಾಯವಾಣಿ 1098 ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಮಕ್ಕಳ ಮೇಲಿನ ಯಾವುದೇ ದೌರ್ಜನ್ಯ, ಕಿರುಕುಳ ಅಥವಾ ಹಿಂಸೆ ಕಂಡು ಬಂದಲ್ಲಿ ತಕ್ಷಣ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಬಹುದು. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸ್ಥಳೀಯ ಮಟ್ಟದಲ್ಲಿ ಮಕ್ಕಳ ಸಮಸ್ಯೆಗಳ ಬಗ್ಗೆ ಮುತುವರ್ಜಿಯಿಂದ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

ಮಕ್ಕಳ ರಕ್ಷಣಾ ಘಟಕದ ಕಾಂತರಾಜು ಕಾರ್ಯಕ್ರಮ ನಿರ್ವಹಿಸಿದರು. ವಕೀಲ ಮನು, ಡಿವೈಎಸ್ಪಿ ಗಂಗಾಧರಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಧರಣಿ ಕುಮಾರ್ ಮತ್ತಿತರರಿದ್ದರು.

# ಪಾಲಿಕೆ ವಾರ್ಡ್ ಮರು ವಿಂಗಡಣೆ ಅವೈಜ್ಞಾನಿಕ

## ಸರಿಪಡಿಸದಿದ್ದರೆ ಕೋರ್ಟ್ ಮೊರೆ: ಪಾಲಿಕೆ ಮುಸ್ಲಿಂ ಮಾಜಿ ಸದಸ್ಯರ ಎಚ್ಚರಿಕೆ

• ಪ್ರಜೋದಯ ವರದಿ

**ಹಾಸನ:** ಮಹಾನಗರ ಪಾಲಿಕೆ ವಾರ್ಡ್ ಮರುವಿಂಗಡಣೆ ಅವೈಜ್ಞಾನಿಕವಾಗಿದ್ದು, ಮುಸ್ಲಿಂ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ. ಈ ಲೋಪ ಸರಿಪಡಿಸದಿದ್ದರೆ ಕೋರ್ಟ್ ಮೊರೆ ಹೋಗಲಾಗುವುದೆಂದು ಪಾಲಿಕೆ ಮಾಜಿ ಸದಸ್ಯರು ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಾಲಿಕೆ ಮಾಜಿ ಸದಸ್ಯ ಅಮೀರ್‌ಜಾನ್ ಅವರು, ಹಿಂದೆ ನಗರಸಭೆ ಇದ್ದಾಗ ನಮ್ಮ ಸಮುದಾಯದ ಏಳೆಂಟು ಮಂದಿ ಕೌನ್ಸಿಲರ್ ಆಗಿ ಗೆಲ್ಲುವ ಅವಕಾಶ ಇತ್ತು. ಆದರೀಗ ಇಬ್ಬರು ಸ್ಪರ್ಧೆ ಮಾಡಿ ಗೆಲ್ಲುವುದೂ ಕಷ್ಟವಾಗಿದೆ.



ಹಿಂದೆ ಒಂದೊಂದು ವಾರ್ಡ್‌ನಲ್ಲಿ ನಾಲ್ಕೈದು ಸಾವಿರ ಮತದಾರರಿದ್ದರು. ಈಗ 10, 11 ಸಾವಿರ ಮತದಾರರು ಒಂದೊಂದು ವಾರ್ಡ್‌ನಲ್ಲಿ ಇದ್ದಾರೆ. ಹಿಂದೆ ಇದ್ದ ವಾರ್ಡ್‌ಗಳನ್ನು ಛಿದ್ರ ಮಾಡಿ, ಹಂಚಿಕೆ ಮಾಡಲಾಗಿದೆ. ಪರಿಚಯವಿಲ್ಲದ ವಾರ್ಡ್‌ಗಳಿಗೆ ಸೇರ್ಪಡೆ ಮಾಡಲಾಗಿದೆ. ಇದರಿಂದ ನಾವು ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಸಲು ಅವಕಾಶ ಇಲ್ಲದಂತಾಗಿದೆ. ಜನಸಂಖ್ಯೆ ನೋಡದೆ ಕ್ಷೇತ್ರ ವಿಂಗಡಣೆ ಮಾಡಲಾಗಿದೆ. ಒಂದು ವಾರ್ಡ್‌ನಲ್ಲಿ 5 ರಿಂದ 6 ಸಾವಿರ ಮತದಾರರಿದ್ದರೆ ಕೆಲ ವಾರ್ಡ್‌ಗಳಲ್ಲಿ 10 ರಿಂದ 11 ಸಾವಿರ ಮತದಾರರನ್ನು ಸೇರಿಸಲಾಗಿದೆ. ಇದರಿಂದ ಮುಸ್ಲಿಂ ಮುಖಂಡರಿಗೆ ಅನ್ಯಾಯವಾದಂತಾಗಿದ್ದು, ಅಭಿವೃದ್ಧಿಗೂ ಹಿನ್ನಡೆ ಆಗಲಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಹಾಗು ಜಿಲ್ಲಾ ಉಸ್ತುವಾರಿ ಸಚಿವರು ಗಮನ ಹರಿಸಬೇಕು. ಈ ಬಗ್ಗೆ ಜಿಲ್ಲಾಧಿಕಾರಿಗೆ ಆಕ್ಷೇಪಣೆ ಸಲ್ಲಿಸುವುದಾಗಿ ಹೇಳಿದರು.

» ನಾಲ್ಕನೇ ಪುಟದಲ್ಲಿ

## ಫೆ.24 ರಂದು ದಿಶಾ ಸಭೆ

• ಪ್ರಜೋದಯ ವರದಿ

**ಹಾಸನ :** ಸಂಸದ ಶ್ರೇಯಸ್ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ(ದಿಶಾ) ಹಾಗೂ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಸಭೆಯನ್ನು ಫೆ.24 ರಂದು ಬೆಳಿಗ್ಗೆ 10:30 ಕ್ಕೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸದಸ್ಯ ಕಾರ್ಯದರ್ಶಿ ಬಿ.ಆರ್. ಪೂರ್ಣಿಮಾ ಅವರು ತಿಳಿಸಿದ್ದಾರೆ.

## ದುದ್ದ ಹೋಬಳಿ ಗಾಂಧಿ ನಗರದಲ್ಲಿ ಕುಡಿಯುವ ನೀರಿಗೆ ತತ್ವಾರ


• ಪ್ರಜೋದಯ ವರದಿ

**ಹಾಸನ:** ಬೇಸಿಗೆ ಆರಂಭಕ್ಕೂ ಮೊದಲೇ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿಗೆ ತತ್ವಾರ ಎದುರಾಗಿದ್ದು, ಜಲ ಜೀವನ್ ಮಿಷನ್ ಯೋಜನೆಯಡಿ ಪೂರೈಸುವ ನಲ್ಲಿ ನೀರು ಸಹ ಕಲುಷಿತವಾಗಿದೆ ಎಂದು ಆರೋಪಿಸಿ ದುದ್ದ ಹೋಬಳಿಯ ಗಾಂಧಿ ನಗರದ ನಿವಾಸಿಗಳು ಮಂಗಳವಾರ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮದಲ್ಲಿ ಕಳೆದ ಒಂದು ತಿಂಗಳಿನಿಂದ ಕುಡಿಯುವ ನೀರಿಗೆ ತತ್ವಾರ ಎದುರಾಗಿದೆ. ಗ್ರಾಮ ಪಂಚಾಯಿತಿ ಹಾಗು ತಾಲ್ಲೂಕು ಪಂಚಾಯಿತಿ ಅಧಿಕಾರಿಗಳಿಗೆ ಮಾಹಿತಿ ನೀಡಿದರೂ ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲ. ಕಲುಷಿತ ನೀರು ಕುಡಿದು ಅನಾರೋಗ್ಯಕ್ಕೀಡಾಗುವಂತಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಮೊದಲು ನಲ್ಲಿ ಮೂಲಕ ಗುಣಮಟ್ಟದ ನೀರು ಪೂರೈಸಲಾಗುತ್ತಿತ್ತು. ಇತ್ತೀಚೆಗೆ ಕಂದು ಬಣ್ಣ ಮಿಶ್ರಿತ ನೀರು ನಲ್ಲಿಯಲ್ಲಿ ಬರುತ್ತಿದೆ. ಗ್ರಾಮದ ಎಲ್ಲಾ ಕುಟುಂಬಸ್ಥರು

» ನಾಲ್ಕನೇ ಪುಟದಲ್ಲಿ



## ಪ್ರತ್ಯೇಕ ಅಪಘಾತ : ಬಾಲಕ ಸೇರಿ ಮೂವರ ಸಾವು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ವಿವಿಧೆಡೆ ಸಂಭವಿಸಿದ ಪ್ರತ್ಯೇಕ ರಸ್ತೆ ಅವಘಾತಗಳಲ್ಲಿ ಬಾಲಕ ಸೇರಿ ಮೂವರು ಮೃತಪಟ್ಟಿದ್ದಾರೆ.

ಪೈಪ್‌ಲೈನ್ ವಾಲ್ ಸ್ಲ್ಯಾಬ್‌ಗೆ ಬಿದ್ದು ಬೈಕ್ ಸವಾರ ಮೃತಪಟ್ಟಿರುವ ಘಟನೆ ಚನ್ನರಾಯಪಟ್ಟಣದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ನಡೆದಿದೆ. ಅಡಗೂರು ಗ್ರಾಮದ ನರಸಿಂಹೇಗೌಡ (45) ಸಾವನ್ನಪ್ಪಿದ್ದಾರೆ. ಹೊಳೆನರಸೀಪುರದಿಂದ ಚನ್ನರಾಯಪಟ್ಟಣಕ್ಕೆ ಬರುತ್ತಿದ್ದಾಗ ಛೇಂಬರ್‌ಗಳ ಮೇಲೆ ಹಾಕಿದ್ದ ಸ್ಲ್ಯಾಬ್‌ನ್ನು ಮುಚ್ಚದ ಪರಿಣಾಮ ಅದರೊಳಗೆ ಬಿದ್ದಿದ್ದಾರೆ. ಗಂಭೀರ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ರಸ್ತೆಗೆ ನಾಯಿ ಅಡ್ಡ ಬಂದಿದ್ದರಿಂದ ನಿಯಂತ್ರಣ ತಪ್ಪಿ ಬೈಕ್ ಸವಾರ ನುಗ್ಗೇಹಳ್ಳಿ ಹೋಬಳಿ ಜಿ.ಎನ್.ಕೊಪ್ಪಲು ಗ್ರಾಮದ (56) ಮೃತಪಟ್ಟಿರುವ ಘಟನೆ ತಿಪಟೂರು-ಚನ್ನರಾಯಪಟ್ಟಣ ರಸ್ತೆಯ ಹಾರೇಕಟ್ಟೆ ಸಮೀಪ ನಡೆದಿದೆ. ನುಗ್ಗೇಹಳ್ಳಿಯಿಂದ ಊರಿಗೆ ಬರುತ್ತಿದ್ದಾಗ ಬೀದಿ ನಾಯಿ ರಸ್ತೆಗೆ ಅಡ್ಡಲಾಗಿ ಬಂದಿದ್ದು, ಡಿಕ್ಕಿಯಾಗುವುದನ್ನು ತಪ್ಪಿಸಲು ಜೋರಾಗಿ ಬ್ರೇಕ್ ಹಾಕಿದ್ದರಿಂದ ನಿಯಂತ್ರಣ ತಪ್ಪಿ ರಸ್ತೆ ಮೇಲೆ ಬಿದ್ದಿದ್ದಾರೆ. ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ನುಗ್ಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿಯಾಗಿ 12 ವರ್ಷದ ಬಾಲಕ ಮೃತಪಟ್ಟಿರುವ ಘಟನೆ ಅರಕಲಗೂಡು ತಾಲ್ಲೂಕು ಯಗಟಿ ಗ್ರಾಮದ ದೇವಸ್ಥಾನ ಬಳಿ ನಡೆದಿದೆ. ಬಿಹಾರ ಮೂಲದ ರಂಜಿತ್ ಸಿಂಗ್ ಅವರ ಪುತ್ರ ಪವನ್‌ಕುಮಾರ್ ಸಿಂಗ್ ಮೃತ ದುರ್ದೈವಿ. ಈ ಕುಟುಂಬ ಜೋಡಿಗುಬ್ಬಿಯಲ್ಲಿ ವಾಸವಿದ್ದು, ಕೂಲಿ ಕೆಲಸ ಮಾಡಿಕೊಂಡಿದ್ದಾರೆ. ಫೆ.16ರಂದು ಬಾಲಕ ಹಣ್ಣುಗಳನ್ನು ತರಲು ಜೋಡಿಗುಬ್ಬಿ ಕ್ರಾಸ್‌ಗೆ ತೆರಳಿದ್ದ. ಯಗಟಿ ದೇವಸ್ಥಾನದ ಬಳಿ ರಸ್ತೆಯ ಎಡಬದಿಯಲ್ಲಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಸ್ಥಳದಲ್ಲೇ ಮೃತಪಟ್ಟಿದ್ದಾನೆ.

## ಸರ್ಕಾರ, ದಾನಿಗಳಿಗೆ ಜಿಲ್ಲಾಧ್ಯಕ್ಷ ಜಿ.ಎಲ್.ಮುದ್ದೇಗೌಡ ಕೃತಜ್ಞತೆ

# ಒಕ್ಕಲಿಗರ ಸಂಘದ ಕಾರ್ಯಕ್ಕೆ ತೆರಿಗೆ ವಿನಾಯಿತಿ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರ ಜಿಲ್ಲಾ ಒಕ್ಕಲಿಗರ ಸಂಘದ ಕಲ್ಯಾಣ ಮಂಟಪ ನಿರ್ಮಾಣಕ್ಕೆ ಹೆಚ್ಚಿನ ಸಹಕಾರ ನೀಡುವ ಜೊತೆಗೆ ನಿವೇಶನ ಮೊತ್ತದಲ್ಲಿ ಸಂಪೂರ್ಣ ತೆರಿಗೆ ವಿನಾಯಿತಿ ನೀಡಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಜಿ.ಎಲ್.ಮುದ್ದೇಗೌಡ ಅವರು ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1936ರಲ್ಲಿ ಸ್ಥಾಪನೆಯಾದ ನಮ್ಮ ಸಂಘ ಜಿಲ್ಲೆಯ ಶೈಕ್ಷಣಿಕ ಹಾಗು ಸಾಮಾಜಿಕ ಕ್ಷೇತ್ರದಲ್ಲಿ ಮಹತ್ವದ ಸೇವೆ ಸಲ್ಲಿಸುತ್ತಿದೆ. ದಿ. ಎಂ.ಆರ್.ಪುಟ್ಟಸ್ವಾಮಯ್ಯ ಅವರ ದಾನದಿಂದ ಶಂಕರ ಮಠ ರಸ್ತೆಯಲ್ಲಿ ವಿದ್ಯಾರ್ಥಿ ನಿಲಯ ಆರಂಭಗೊಂಡಿದ್ದು, ನಂತರ ದಿ.ಎ.ತಿಮ್ಮಪ್ಪಗೌಡರು ಸುಮಾರು 30 ವರ್ಷಗಳ ಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಸಂಘದ ಮೂಲಸೌಕರ್ಯ ವಿಸ್ತರಣೆಗೆ ಕಾರಣರಾದರೆಂದು ಹೇಳಿದರು.



2001ರಿಂದ ನಾನು ಅಧ್ಯಕ್ಷನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಸಂಘವು ಮಹತ್ವದ ಅಭಿವೃದ್ಧಿ ಕಾರ್ಯ ಕೈಗೊಂಡಿದೆ. ರವೀಂದ್ರನಗರ ಹಾಗು ಬಿ.ಎಂ. ರಸ್ತೆಯಲ್ಲಿ ಹೆಣ್ಣುಮಕ್ಕಳಿಗೆ 900ಕ್ಕೂ ಹೆಚ್ಚು ವಸತಿ ವ್ಯವಸ್ಥೆ ಕಲ್ಪಿಸಲಾಗಿದ್ದು, ಸತ್ಯಮಂಗಲ ಬಡಾವಣೆಯಲ್ಲಿ 250 ಗಂಡು ಮಕ್ಕಳಿಗೆ ವಸತಿ ನಿಲಯ ನಿರ್ಮಿಸಲಾಗಿದೆ. ಒಟ್ಟಾರೆ ಸುಮಾರು 1,000 ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಒದಗಿಸಲಾಗುತ್ತಿದೆ. 2011 ರಿಂದ ಬಡ ಕುಟುಂಬಗಳ 400ಕ್ಕೂ ಹೆಚ್ಚು ಮಕ್ಕಳಿಗೆ ರಿಯಾಯಿತಿ ದರದಲ್ಲಿ ಊಟ ಮತ್ತು ನಿರ್ವಹಣಾ ವೆಚ್ಚವನ್ನು ಸಂಘವೇ ಭರಿಸುತ್ತಿದ್ದು, ವರ್ಷಕ್ಕೆ ಸುಮಾರು 25 ಲಕ್ಷ ರೂ. ವೆಚ್ಚವಾಗುತ್ತಿದೆ. ಇದುವರೆಗೆ 8,500ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ನಿಲಯ ಸೌಲಭ್ಯ ಪಡೆದು ಶಿಕ್ಷಣ ಪೂರ್ಣಗೊಳಿಸಿದ್ದಾರೆ ಎಂದರು.

ಭವಿಷ್ಯದಲ್ಲಿ ಶಾಶ್ವತ ಆದಾಯದ ಮೂಲ ಸೃಷ್ಟಿಸುವ ಉದ್ದೇಶದಿಂದ ಎಸ್.ಎಂ.ಕೆ. ನಗರದಲ್ಲಿ 1 ಎಕರೆ ನಿವೇಶನ ಪಡೆದು ಕಲ್ಯಾಣ ಮಂಟಪ ನಿರ್ಮಿಸಲು ನಿರ್ಧರಿಸಲಾಯಿತು. ಈ ಸಂಬಂಧ ಮಾಜಿ ಶಾಸಕ ಪ್ರೀತಮ್ ಜೆ.ಗೌಡ ಅವರು ಸರ್ಕಾರದಿಂದ ನಿವೇಶನ ಮಂಜೂರು ಮಾಡಿಸಲು ಸಹಕರಿಸಿದರು. ಆದರೆ, ನಿವೇಶನದ ಮೌಲ್ಯದ ಶೇ.10 ಮೊತ್ತವನ್ನು ಸಂಘ ಪಾವತಿಸಿದ ಬಳಿಕ ಉಳಿದ ಸುಮಾರು 4 ಕೋ.ರೂ.ನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಲ್ಯಾಣ ಮಂಟಪದ ಸಮಾಜಮುಖಿ ಉದ್ದೇಶ ತಿಳಿದು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ, ಉಳಿದ ಮೊತ್ತವನ್ನು ವಿನಾಯಿತಿ ಮಾಡಿಸಿದರು. ಅದಕ್ಕಾಗಿ ಅವರಿಗೆ ಧನ್ಯವಾದ ಹೇಳುವುದಾಗಿ ತಿಳಿಸಿದರು.

ಸಮುದಾಯ ಭವನ ನಿರ್ಮಾಣಕ್ಕೆ ನೇರ ಹಾಗು ಪರೋಕ್ಷವಾಗಿ ಕೊಡುಗೆ ನೀಡಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಹಾಲಿ ಸಂಸದರಾದ ಡಾ||ಮಂಜುನಾಥ್, ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಸದಸ್ಯ ಮಧು ಮಾದೇಗೌಡ, ಶಾಸಕರಾದ ಹೆಚ್.ಪಿ.ಸ್ವರೂಪ್ , ಸಿ.ಎನ್.ಬಾಲಕೃಷ್ಣ, ಹೆಚ್.ಕೆ.ಸುರೇಶ್, ಮಾಜಿ ಶಾಸಕ ಪ್ರೀತಮ್ ಗೌಡ ಹಾಗು ಹಲವು ಗಣಿ ಮಾಲೀಕರು, ಗುತ್ತಿಗೆದಾರರು, ಜಿಲ್ಲಾ ಸಹಕಾರ ಬ್ಯಾಂಕ್ ಮತ್ತು ಕೃಷಿಕ್ ಸರ್ವೋದಯ ಫೌಂಡೇಶನ್ ಬೆಂಗಳೂರು ಸೇರಿ ಅನೇಕ ಜನಪ್ರತಿನಿಧಿಗಳು ಹಾಗೂ ದಾನಿಗಳು ಬೆಂಬಲ ನೀಡಿದ್ದಾರೆ. ಮುಂದೆಯೂ ಯಾರಾದರೂ ಇದ್ದರಲ್ಲಿ ನೆರವು ನೀಡಬೇಕೆಂದು ಮನವಿ ಮಾಡಿದರು.

ಸಂಘದ ಪದಾಧಿಕಾರಿಗಳಾದ ಹೆಮ್ಮಿಗೆ ಮೋಹನ್, ಆರ್. ಅನಂತಕುಮಾರ್, ಗಣೇಶ್, ಲಕ್ಷ್ಮಣ್, ಅಪ್ಪೇಗೌಡ ಇದ್ದರು.

## ಜ.21 ರಂದು ಜನಸ್ಪಂದನಾ ಸಭೆ

• ಪ್ರಜೋದಯ ವರದಿ

**ಹಾಸನ :** ಜಿಲ್ಲಾಧಿಕಾರಿಯವರ ಕಚೇರಿಯಲ್ಲಿ ಫೆ.21 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರ ಅಧ್ಯಕ್ಷತೆಯಲ್ಲಿ ಜನಸ್ಪಂದನಾ ಸಭೆ ಆಯೋಜಿಸಲಾಗಿದೆ.

ಸಾರ್ವಜನಿಕ ಕುಂದು ಕೊರತೆ ಅಹವಾಲನ್ನು ದಾಖಲಿಸಲು ಸರ್ಕಾರವು ಏಕೀಕೃತ ಸಾರ್ವಜನಿಕ ದೂರು ನಿವಾರಣಾ ತಂತ್ರಾಂಶದಲ್ಲಿ (Integrated Public Grievance Redressal System) ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಸದರಿ ದಿನದಂದು ಸಾರ್ವಜನಿಕರು ಖುದ್ದು ಹಾಜರಾಗಿ ಮನವಿಗಳನ್ನು ನೀಡಲು ತೆರೆಯಲಾದ ಕೌಂಟರ್‌ಗಳಲ್ಲಿ ಅರ್ಜಿಗಳನ್ನು ದಾಖಲಿಸಿಕೊಂಡು ಟೋಕನ್ ನಂಬರ್‌ಗಳನ್ನು ಸ್ವೀಕರಿಸಿ ತಮ್ಮ ಅಹವಾಲನ್ನು ಸಲ್ಲಿಸಬಹುದೆಂದು ಅಪರ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

# ಧನರೇಖೆ ಇಲ್ಲದ ಅಂಗೈ.. ಬಡತನ ರೇಖೆಯಡಿ ಇಲ್ಲದ ಜೀವನ..!

■ **ನಾನು ಬಿಪಿಎಲ್ ಕಾರ್ಡ್ ಹೊಂದಲು ಯೋಗ್ಯನಲ್ಲ. ನಾನು ಬಡತನದ ರೇಖೆಗಿಂತ ಕೆಳಗಿಲ್ಲ ಅನಿಸಿ ಅದನ್ನು ವಾಪಸ್ ಕೊಟ್ಟುಬಿಟ್ಟೆ. ಎಪಿಎಲ್ ಕಾರ್ಡ್ ಮಾಡಿಸಿಕೊಂಡೆ. ಆ ನಂತರದಲ್ಲಿ ಕೆಲಸ ಹೋಯ್ತು. ತುತ್ತು ಅನ್ನಕ್ಕೂ ಕಷ್ಟದ ಪರಿಸ್ಥಿತಿಗೆ ಬಿದ್ದೆ. ಬಿಪಿಎಲ್ ಕಾರ್ಡ್ ವಾಪಸ್ ಕೊಡಬಾರದಿತ್ತು ಅಂತ ಬಹಳ ಬಹಳವಾಗಿ ಅನಿಸಿತು.**

ಭಾರತದಲ್ಲಿ ಬಡತನ ರೇಖೆಯ ಮಾನದಂಡವೇ ನೆಟ್ಟಗಿಲ್ಲ. ಇಲ್ಲಿ ಲೋ ಇನ್ ಕಮ್ ಲೆವೆಲ್ ಅನ್ನೋದನ್ನೇ ತುಂಬ ಅವೈಜ್ಞಾನಿಕವಾಗಿ ಅತಾರ್ಕಿಕವಾಗಿ ನಿಗದಿಪಡಿಸಲಾಗಿದೆ. ಅಷ್ಟೊಂದು ಕಡಿಮೆ ಆದಾಯ ಯಾರಿಗೂ ಇರಲು ಸಾಧ್ಯವೇ ಇಲ್ಲ. ದೇಶ ನಿಗದಿಪಡಿಸಿರುವ ಆ ಲೋ ಇನ್ ಕಮ್ ಅನ್ನೂ ದುಡಿಯಲಾರದವ ಭೂಮಿ ಮೇಲೆ ಬದುಕುವುದಕ್ಕೇ ಅನರ್ಹ.

ಇತ್ತೀಚೆಗೆ ಗೆಳೆಯನೊಬ್ಬ ತನ್ನ ಮಗಳನ್ನು ಆಸ್ಪತ್ರೆಗೆ ಸೇರಿಸಿದ್ದ. ಗಂಭೀರ ಅನಾರೋಗ್ಯಕ್ಕೆ ಒಳಗಾಗಿದ್ದ ಅವಳ ಚಿಕಿತ್ಸೆಗೆ ಲಕ್ಷಗಟ್ಟಲೆ ಖರ್ಚು ಎದುರಾಗಿತ್ತು. ಆದರೆ ಗೆಳೆಯ ಸ್ಥಿತಿವಂತನಲ್ಲ. ಅನಿರೀಕ್ಷಿತವಾಗಿ ಎದುರಾದ ಇಂಥದ್ದೊಂದು ಸವಾಲಿಗೆ ಆತ ಸಿದ್ಧನಿರಲಿಲ್ಲ. ಅಸಲಿಗೆ ಆತನಿಗೆ ನಿಗದಿತ ಆದಾಯವೇ ಇರಲಿಲ್ಲ. ಇಂಥ ಸಮಯದಲ್ಲಿ ಆಸ್ಪತ್ರೆಯವರ ಬಳಿ ರಿಯಾಯಿತಿಗಾಗಿ ವಿನಂತಿಸಿದ.

ಆಸ್ಪತ್ರೆಯವರು ರಿಯಾಯಿತಿ ಕೊಡಲು ಒಪ್ಪಲಿಲ್ಲ. ಇನ್ಶೂರೆನ್ಸ್ ಕೂಡ ಇಲ್ಲದ ಕಾರಣ, ಧನಸಹಾಯಕ್ಕಾಗಿ ಆತ ಕಂಡಕಂಡವರ ಬಳಿ ಕೈಚಾಚುವಂತಾಯ್ತು. ಆಗ ಆಸ್ಪತ್ರೆಯವರೇ ಒಂದು ಉಪಾಯ ಹೇಳಿದರು. ನಿನ್ನ ಬಳಿ ಬಿಪಿಎಲ್ ಕಾರ್ಡ್ ಇದ್ದಿದ್ದರೆ ಎಲ್ಲವೂ ಉಚಿತವಾಗಿ ಆಗುತ್ತಿತ್ತು ಅಂತ. ಈತನ ಬಳಿ ಇದ್ದದ್ದು ಎಪಿಎಲ್ ಕಾರ್ಡ್.

ಅದ್ಯಾವುದೋ ಸಂದರ್ಭದಲ್ಲಿ ಈತ ತನ್ನಲ್ಲಿದ್ದ ಬಿಪಿಎಲ್ ಕಾರ್ಡ್ ಸರೆಂಡರ್ ಮಾಡಿ ಎಪಿಎಲ್ ಕಾರ್ಡ್ ಪಡೆದಿದ್ದ. ಒಂದು ಕಾಲದಲ್ಲಿ ಹೊತ್ತು ಊಟಕ್ಕೂ ಕಷ್ಟವಿತ್ತು. ಆಗ ಬಿಪಿಎಲ್ ಕಾರ್ಡ್ ಮಾಡಿಸಿದ್ದೆ. ಆದರೆ ನಂತರ ತಿಂಗಳಿಗೆ ಇಪ್ಪತ್ತೈದು ಸಾವಿರ ದುಡಿಯುವಷ್ಟು ಗಟ್ಟಿ ಆದೆ.

ನಾನು ಬಿಪಿಎಲ್ ಕಾರ್ಡ್ ಹೊಂದಲು ಯೋಗ್ಯನಲ್ಲ. ನಾನು ಬಡತನದ ರೇಖೆಗಿಂತ ಕೆಳಗಿಲ್ಲ ಅನಿಸಿ ಅದನ್ನು ವಾಪಸ್ ಕೊಟ್ಟುಬಿಟ್ಟೆ. ಎಪಿಎಲ್ ಕಾರ್ಡ್ ಮಾಡಿಸಿಕೊಂಡೆ. ಆ ನಂತರದಲ್ಲಿ ಕೆಲಸ ಹೋಯ್ತು. ತುತ್ತು ಅನ್ನಕ್ಕೂ ಕಷ್ಟದ ಪರಿಸ್ಥಿತಿಗೆ ಬಿದ್ದೆ. ಬಿಪಿಎಲ್ ಕಾರ್ಡ್ ವಾಪಸ್ ಕೊಡಬಾರದಿತ್ತು ಅಂತ ಬಹಳ ಬಹಳವಾಗಿ ಅನಿಸಿತು.

ಸುತ್ತ ತಿರುಗಿ ನೋಡಿದರೆ ಎಂಥೆಂಥ ಅನುಕೂಲವಂತರ ಕೈಲೆಲ್ಲ ಬಿಪಿಎಲ್ ಕಾರ್ಡ್ ಇದೆ. ನಾನೆಂಥ ದಡ್ಡ ಅನಿಸಿತು. ಅತಿ ಪ್ರಾಮಾಣಿಕನಾಗಿ ಹೋದೆನಾ? ಅನಗತ್ಯ ನಿಯತ್ತು ತೋರಿಸಿದೆನಾ? ಅಂತೆಲ್ಲ ನನ್ನ ನಿರ್ಧಾರದ ಬಗ್ಗೆ ನನಗೇ ತಪ್ಪೆನಿಸಿತು. ಆದರೂ ಪ್ರತಿ ಬಾರಿ ಪತ್ರಿಕೆಯಲ್ಲಿ ನಕಲಿ ಬಿಪಿಎಲ್ ಕಾರ್ಡ್ ಹೊಂದಿದವರ ಆಸ್ತಿ ಜಪ್ತಿ, ಕಾರ್ಡ್ ಜಪ್ತಿ, ಬಂಧನ, ದಂಡ ಅಂತೆಲ್ಲ ಸುದ್ದಿಗಳು ಪ್ರಕಟವಾದಾಗ ನಾನು ನಿಟ್ಟುಸಿರು ಬಿಡುತ್ತಿದ್ದೆ.

ಟಿವಿ ಫ್ರಿಜ್ಜು ಇದ್ದ ಮನೆಯ ಬಿಪಿಎಲ್ ಕಾರ್ಡ್ ಜಪ್ತಿ ಮಾಡಲಾಗುತ್ತೆ ಎಂದಾಗ, ನಾನಾಗಲೇ ಕೊಟ್ಟು ಸೇಫ್ ಆದೆ ಅಂದುಕೊಂಡಿದ್ದೆ. ಆದರೆ ಈಗ ಮಗಳ ಪ್ರಾಣ ಉಳಿಸಿ ಕೊಳ್ಳೋಕೆ ಅದೇ ಬಿಪಿಎಲ್ ಕಾರ್ಡ್ ಬೇಕಾಗಿದೆ. ಸರೆಂಡರ್ ಮಾಡಿ ತಪ್ಪು ಮಾಡಿ ಬಿಟ್ಟೆ ಗೆಳೆಯಾ ಅಂದ. ಆಗ ಅದೇ ಆಸ್ಪತ್ರೆ ಸಿಬ್ಬಂದಿ ಮತ್ತೆ ಐಡಿಯಾ ಕೊಟ್ಟ.

ಸಾರ್ ಯಾಕೆ ಯೋಚನೆ ಮಾಡ್ತೀರಿ ಒಂಚೂರು ಲಂಚ ತಳ್ಳಿದರೆ ನಾಳೆಯೇ ಬಿಪಿಎಲ್ ಕಾರ್ಡ್ ಸಿಗೋ ಹಾಗೆ ಮಾಡ್ತೀನಿ. ಅದನ್ನ ಆಸ್ಪತ್ರೆಗೆ ಕೊಟ್ಟರೆ ಫ್ರೀ ಟ್ರೀಟ್‌ಮೆಂಟ್ ಸಿಗುತ್ತೆ!

ಇದೆಲ್ಲ ಗಮನಿಸುತ್ತಾ ಇದ್ದ ನನಗೆ ವ್ಯವಸ್ಥೆಯ ಬಗ್ಗೆ ವಾಕರಿಕೆ ಬಂದಂತಾಯ್ತು. ಎಂಥ ಮತಿಗೇಡಿ ವ್ಯವಸ್ಥೆ ಇದು? ಎಂಥ ಭ್ರಷ್ಟ ವ್ಯವಸ್ಥೆ ಇದು. ಪ್ರತಿ ಮೂರು ತಿಂಗಳಿಗೊಮ್ಮೆ ಆಹಾರ ಇಲಾಖೆಯ ಪ್ರಹಸನ ಶುರುವಾಗುತ್ತದೆ. ನಕಲಿ ಬಿಪಿಎಲ್ ಕಾರ್ಡ್ ಹೊಂದಿದವರಿಗೆ ಶಿಕ್ಷೆ, ಕಾರ್ಡ್ ಹೊಂದಿರುವ ಅನರ್ಹರ ಕಾರ್ಡ್ ಜಪ್ತಿ ಅಂತ. ಇದು ಯಾವತ್ತಿಗೂ ಚಾಲ್ತಿಯಲ್ಲಿರುವ ನಿರಂತರ ನಾಟಕವಷ್ಟೆ.

ಲಕ್ಷಕ್ಕೊಬ್ಬ ಪ್ರಾಮಾಣಿಕ ಅಥವಾ ಶಿಕ್ಷೆಯ ಭಯಕ್ಕೆ ಒಳಗಾದವ ಕಾರ್ಡ್ ಹಿಂದಿರುಗಿಸುತ್ತಾ ನಷ್ಟೆ. ಪ್ರತಿದಿನವೂ ಅನರ್ಹರಿಗೆ ಬಿಪಿಎಲ್ ಕಾರ್ಡ್ ಕೊಡಿಸಲಾಗುತ್ತದೆ. ಚಾಪೆ ರಂಗೋಲಿಯೊಳಗೆ ತೂರುವುದನ್ನು ಬ್ರೋಕರ್‌ಗಳು, ಅಧಿಕಾರಿಗಳು ಕಲಿತಿರುತ್ತಾರೆ. ಅವರು ಎಂಥ ಕೋಟ್ಯಧೀಶನಿಗೂ ಬಿಪಿಎಲ್ ಕಾರ್ಡ್ ಕೊಡಿಸಬಲ್ಲರು. ಕಡುಬಡವನಿಗೂ ಬಿಪಿಎಲ್ ಕಾರ್ಡ್ ಸಿಗದಂತೆ ಮಾಡಬಲ್ಲರು.


ಒಮ್ಮೆ ಈ ಕಾರ್ಡ್ ಹಿಂದಿನ ಲಾಜಿಕ್ ಬಗ್ಗೆ ನೋಡೋಣ. ಟಿವಿ, ಬೈಕು, ಫ್ರಿಜ್ಜು ಇರೋಮ್ರು ಬಿಪಿಎಲ್ ಕಾರ್ಡಿಗೆ ಅನರ್ಹರು ಅಂತ ಒಮ್ಮೆ ಘೋಷಣೆಯಾಗಿತ್ತು. ಎಂಥ ತುಂಬ ಮೂರ್ಖ ಘೋಷಣೆ ಅಲ್ಲವೇ ಇದು? ಸರಿಯಾಗಿ ನೋಡೋದಾದರೆ ಬಿಪಿಎಲ್ ಕಾರ್ಡುಗಳನ್ನು ಹೊಂದಿರುವ ಶೇಕಡಾ ಎಪ್ಪತ್ತರಷ್ಟು ಮಂದಿ ಅನರ್ಹರೇ. ಯಾವುಯಾವುದೋ ಬೇಸಿಸ್ಸಲ್ಲಿ. ಸ್ಥಳೀಯ ರಾಜಕಾರಣಿಗಳ ಬ್ರೋಕರ್‌ಗಳ ಫುಡ್ ಆಫೀಸ್ ಸಿಬ್ಬಂದಿ ಸಹಾಯದಿಂದ ಒಳದಾರಿಯಲ್ಲಿ ಬಿಪಿಎಲ್ ಕಾರ್ಡ್ ಮಾಡಿಸಿಕೊಂಡಿರುವ ಉದಾಹರಣೆಗಳೇ ಹೆಚ್ಚು

ಫಸ್ಟ್ ಆಫ್ ಆಲ್... ಭಾರತದಲ್ಲಿ ಬಡತನ ರೇಖೆಯ ಮಾನದಂಡವೇ ನೆಟ್ಟಗಿಲ್ಲ. ಇಲ್ಲಿ ಲೋ ಇನ್ ಕಮ್ ಲೆವೆಲ್ ಅನ್ನೋದನ್ನೇ ತುಂಬ ಅವೈಜ್ಞಾನಿಕವಾಗಿ ಅತಾರ್ಕಿಕವಾಗಿ ನಿಗದಿ ಪಡಿಸಲಾಗಿದೆ. ಅಷ್ಟೊಂದು ಕಡಿಮೆ ಆದಾಯ ಯಾರಿಗೂ ಇರಲು ಸಾಧ್ಯವೇ ಇಲ್ಲ. ದೇಶ ನಿಗದಿಪಡಿಸಿರುವ ಆ ಲೋ ಇನ್ ಕಮ್ ಕೂಡ ದುಡಿಯಲಾರದವ ನನ್ನ ಪ್ರಕಾರ ಭೂಮಿ ಮೇಲೆ ಬದುಕುವುದಕ್ಕೇ ಅನರ್ಹ.

ಒಬ್ಬ ಭಿಕ್ಷುಕ ಕೂಡ ಆ ಲೋ ಇನ್ ಕಮ್‌ಗಿಂತ ಹೆಚ್ಚು ದುಡಿಯುತ್ತಾನೆ. ವರ್ಷಕ್ಕೆ ಇಪ್ಪತ್ತೈದು ಸಾವಿರ ಕೂಡ ದುಡಿಯೋಕಾಗದವನು ಬದುಕಿ ಏನು ಮಾಡಬೇಕು. ಅದನ್ನು ಬಡತನ ಅನ್ನಲಾಗುವುದಿಲ್ಲ. ಸೋಮಾರಿತನ ಮೈಗಳ್ಳತನ ಅನ್ನಬೇಕಾಗುತ್ತದೆ. ಅಷ್ಟನ್ನು ದುಡಿಯಬಲ್ಲವನಿಗೆ ಟಿವಿ ಬೈಕು ಫ್ರಿಜ್ಜು ಖರೀದಿಸಲು ಅಸಾಧ್ಯವಲ್ಲ. ಅಂದಹಾಗೆ, ಈಗ ಟಿವಿ, ಫ್ರಿಜ್ಜು, ಬೈಕು ಇವ್ಯಾವುದೂ ಲಕ್ಷುರಿಗಳಲ್ಲ.

ಇವು ಒಂದರ್ಥದಲ್ಲಿ ಮೂಲ ಅಗತ್ಯಗಳು. ವರ್ಷಕ್ಕೆ ಇಪ್ಪತ್ತು ಸಾವಿರ ದುಡಿಯೋಕೂ ಒಂದು ದ್ವಿಚಕ್ರ ವಾಹನ ಸಾಧನವಾಗಬಹುದು. ಒಬ್ಬ ಹಾಲಿನಂಗಡಿ, ಜ್ಯೂಸ್ ಅಂಗಡಿ ಇಡೋವ್ನಿಗೂ ಫ್ರಿಜ್ಜು ಬೇಕಾಗಬಹುದು. ಒಂದು ಸ್ಮಾರ್ಟ್ ಫೋನಿನ ಬೆಲೆಗಿಂತ ಈಗ ಟಿವಿ ಬೆಲೆ ಕಮ್ಮಿ.



ಹೀಗಿರುವಾಗ ಇವನ್ನೆಲ್ಲ ಮಾನದಂಡವಾಗಿಟ್ಟುಕೊಂಡು ಬಿಪಿಎಲ್ ಕಾರ್ಡ್‌ನ ಅರ್ಹತೆ ಅನರ್ಹತೆ ನಿರ್ಧರಿಸುವುದು ಖಂಡಿತ ದಡ್ಡತನ. ಸರ್ಕಾರ ಮೊದಲು ಪರಿಶೀಲಿಸ ಬೇಕಿರೋದು ನಕಲಿ ಬಿಪಿಎಲ್ ಕಾರ್ಡುದಾರರನ್ನು. ನಮ್ಮ ಕಣ್ಣ ಎದುರು ಕಾಣುವ ಸಾವಿರಾರು ಮಂದಿ ಸ್ಥಿತಿವಂತರು ಬಿಪಿಎಲ್ ಕಾರ್ಡ್ ಹೊಂದಿರುವವರೇ.

ಹಾಗಂತ ಇವರ್ಯಾರೂ ಪಡಿತರ ಅಕ್ಕಿ ಮೇಲೆ ಅವಲಂಬಿತರಲ್ಲ. ಆ ಅಕ್ಕಿಯನ್ನು ತಿನ್ನುವುದಿಲ್ಲ. ತಿನ್ನುವಷ್ಟು ಚೆನ್ನಾಗಿರುವ ಅಕ್ಕಿ ಅಲ್ಲಿ ಸಿಗುವುದೂ ಇಲ್ಲ. ಕಾರ್ಡಿಲ್ಲದ ಬಡವರಿಗೋ.. ಇನ್ಯಾವುದೋ ಅಂಗಡಿ ಹೋಟೆಲ್ಲಿಗೋ ಹಣಕ್ಕೆ ಮಾರಿಕೊಳ್ಳಲು ಇವರಿಗೆ ಬಿಪಿಎಲ್ ಕಾರ್ಡ್ ಬೇಕು.

ಇನ್ಯಾವುದೋ ಬೆನಿಫಿಟ್ ಪಡೆಯಲು ಇವರಿಗೆ ಬಿಪಿಎಲ್ ಕಾರ್ಡ್ ಬೇಕು. ಇಂಥವರಿಂದಾಗಿ ನಿಜಕ್ಕೂ ಅಗತ್ಯವಿರುವ ಬಡವರಿಗೆ ಬಿಪಿಎಲ್ ಕಾರ್ಡ್ ಸಿಗುತ್ತಿಲ್ಲ. ಬಿಪಿಎಲ್ ಕಾರ್ಡ್ ಇರುವವರಿಗೆ ಕ್ವಾಲಿಟಿ ಪಡಿತರ ಸಿಗದಿರಲು ಈ ನಕಲಿ ಕಾರ್ಡುದಾರರ ಸಂಖ್ಯೆ ಹೆಚ್ಚಾಗಿರುವುದೂ ಒಂದು ಮುಖ್ಯ ಕಾರಣ.

ಕಾರ್ಡುಗಳ ಕ್ವಾಂಟಿಟಿ ಜಾಸ್ತಿ ಆದಾಗ ಕ್ವಾಲಿಟಿ ಕಮ್ಮಿ ಆಗುವುದು, ಕಲಬೆರಕೆ ಹೆಚ್ಚುವುದು ಸಹಜವೇ ಅಲ್ವಾ. ಸರ್ಕಾರ ಮೊದಲು ನಕಲಿ ಕಾರ್ಡುದಾರರನ್ನು ಗುರುತಿಸಿ ಕಾರ್ಡು ಹಿಂಪಡೆಯಬೇಕು. ಅದಕ್ಕೆ ಪಾನ್ ಕಾರ್ಡ್ ಮೂಲಕ ಈಗಿರುವ ಕಾರ್ಡ್ ಹೋಲ್ಡರ್‌ಗಳ ಆದಾಯ ಪರೀಕ್ಷೆ ನಡೆಯಬೇಕು.

ಪಾನ್ ಕಾರ್ಡ್ ಇರುವವರ ಆದಾಯ ಬಡತನ ರೇಖೆಗಿಂತ ಹೆಚ್ಚಿದ್ದರೆ ಮುಲಾಜಿಲ್ಲದೇ ದಂಡ ಹಾಕಿ ಕಾರ್ಡ್ ಕ್ಯಾನ್ಸಲ್ ಮಾಡಬೇಕು. ಒಂದೊಮ್ಮೆ ಕಾರ್ಡ್ ಪಡೆದು ಕೆಲವು ವರ್ಷಗಳ ನಂತರ ಅವರು ಬಡತನ ರೇಖೆಯ ಮೇಲೆ ಬಂದಿರಬಹುದು. ಅಂಥವರೂ ಆ ಕೂಡಲೇ ಕಾರ್ಡ್ ರಿಟರ್ನ್ ಮಾಡುವ ಪ್ರಾಮಾಣಿಕತೆ ತೋರಿಸಬೇಕು.

ಇಲ್ಲದಿದ್ದಲ್ಲಿ ಅಂಥವರಿಗೂ ಧೀಮಾರಿ ಹಾಕಿ ಕಾರ್ಡ್ ಕ್ಯಾನ್ಸಲ್ ಮಾಡಬೇಕು. ಪಾನ್ ಇಲ್ಲದೆ.. ಇನ್‌ಕಮ್ ವಿವರ ನೀಡದೇ ಚೆನ್ನಾಗಿಯೇ ಆದಾಯ ಇರುವ ಮಂದಿಯೂ ಇಲ್ಲಿ ಕಮ್ಮಿ ಏನಿಲ್ಲ. ಅಂಥವರ ಬಳಿಯೂ ಬಿಪಿಎಲ್ ಕಾರ್ಡ್ ಇದೆ.

ಅಂಥವರಿಗೆ ಇನ್ನೂ ದೊಡ್ಡ ಶಿಕ್ಷೆ ಆಗಬೇಕು. ಇನ್ನು ನಿರುದ್ಯೋಗಿ ಅಪ್ಪ ಅಮ್ಮನ ಹೆಸರಲ್ಲಿ ಕಾರ್ಡ್ ಮಾಡಿಸಿ ಒಳತೂರಿಕೊಂಡಿರುವ ಒಳ್ಳೆ ಇನ್‌ಕಮ್ ಇರುವ ಕಳ್ ನನ್ಮಕ್ಕಳು ಕೂಡ ಇಲ್ಲಿದ್ರೆ. ಅಂಥವರಿಗೂ ದಂಡ ಬೀಳಬೇಕು. ಕಾರ್ಡ್ ಕ್ಯಾನ್ಸಲ್ ಮಾಡಬೇಕು.

ಅದು ದಿಟ್ಟ ನಿರ್ಧಾರ ಎನಿಸಿಕೊಳ್ಳುತ್ತದೆ. ಕಾರ್ಯದಕ್ಷತೆಯನ್ನೂ ತೋರಿಸುತ್ತದೆ. ಅದು ಬಿಟ್ಟು ಸರ್ಕಾರ ಬೈಕು ಫ್ರಿಜ್ಜು ಟಿವಿ ಇದ್ರೆ ಕ್ಯಾನ್ಸಲ್ ಅಂತ ಘೋಷಿಸಿದರೆ, ಬಿಪಿಎಲ್ ಕಾರ್ಡು ಉಳಿಸಿಕೊಳ್ಳಲು ಬೈಕು ಫ್ರಿಜ್ಜು ಟಿವಿ ಬಚ್ಚಿಡೋದು ಕಷ್ಟದ ವಿಷಯವೇನಲ್ಲ. ಒಂದು ಸರ್ಕಾರ ಬಡವರಿಗೆ ಅದು ಫ್ರೀ ಇದು ಫ್ರೀ ಅಂತ ರಾಶಿ ಯೋಜನೆ ಘೋಷಿಸುತ್ತದೆ.

ಆ ಅವಧಿಯಲ್ಲಿ ಇರೋಬರೋವ್ರೆಲ್ಲ ತಾವೂ ಬಡವರಾಗಿ ಬಿಡೋಣ ಎಂದು ನಕಲಿ ಸರ್ಟಿಫಿಕೇಟ್ ಗಳ ಮೊರೆ ಹೊಕ್ಕು ಬಿಪಿಎಲ್ ಕಾರ್ಡ್ ಮಾಡಿಸಿಕೊಳ್ಳುತ್ತಾರೆ. ವೋಟ್ ಬ್ಯಾಂಕ್ ಪೊಲಿಟಿಕ್ ವರ್ಕ್ ಆಗುತ್ತದೆ. ಆದರೆ ಬೊಕ್ಕಸಕ್ಕೆ ಹೊರೆ ಬೀಳುತ್ತದೆ. ಮುಂಬರುವ ಸರ್ಕಾರಕ್ಕೆ ಇದು ಸವಾಲಾಗುತ್ತದೆ. ಅನಿವಾರ್ಯವಾಗಿ ಕಠಿಣ ಕ್ರಮಕ್ಕೆ ಮುಂದಾಗ ಬೇಕಾಗುತ್ತದೆ.

ಬಿಪಿಎಲ್ ಕಾರ್ಡುಗಳ ಸ್ಕ್ರುಟಿನಿ ಶುರು ಆಗುತ್ತದೆ. ಇದು ಬಡವರ ವಿರೋಧಿ ಸರ್ಕಾರ ಅಂತ ಜನ ಮತ್ತು ವಿರೋಧಪಕ್ಷಗಳು ಸರ್ಕಾರದ ವಿರುದ್ಧ ತಿರುಗಿ ಬೀಳುತ್ತಾರೆ. ಸರ್ಕಾರ ಭಯ ಬಿದ್ದು ಮತ್ತೆ ಯೂಟರ್ನ್ ಹೊಡೆದು ಸುಮ್ಮನಾಗುತ್ತದೆ. ಆಗಾಗ ಒಮ್ಮೆ...ಬಿಪಿಎಲ್ ಕಾರ್ಡ್ ರದ್ದು ಮಾಡುವ ಭಯಹುಟ್ಟಿಸಿ ಮತ್ತೆ ಸುಮ್ಮನಾಗುವ ಪ್ರಕ್ರಿಯೆ ಈಗೆರಡು ವರ್ಷಗಳಿಂದ ನಡೆದೇ ಇದೆ. ಮಾನ ಮರ್ಯಾದೆ ಅಂತ ಇದ್ರೆ ಮೊದಲು ನಕಲಿ ಕಾರ್ಡುದಾರರು ಸ್ವಯಂ ಪ್ರೇರಿತವಾಗಿ ತಮ್ಮ ಕಾರ್ಡುಗಳನ್ನ ಹಿಂದಿರುಗಿಸಲಿ. ನಂತರ ಮಾತಾಡಲಿ.

ಜೊತೆಗೆ ಸರ್ಕಾರ ಒಂದು ಸ್ಪಷ್ಟ ರೂಪುರೇಷೆಯೊಂದಿಗೆ ಬಡತನ ರೇಖೆಯ ನಿಗದಿ.. ರಿಯಲಿಸ್ಟಿಕ್ ಅನಿಸೋ ಲೋ ಇನ್ ಕಮ್ ನಿಗದಿ.. ನಂತರ ಸರಿಯಾದ ಮಾರ್ಗದಲ್ಲಿ ನಕಲಿ ಕಾರ್ಡುದಾರರ ಪರಿಶೀಲನೆ.. ಮಧ್ಯವರ್ತಿಗಳ ನಾಶ... ಇದನ್ನೆಲ್ಲ ಮಾಡಲಿ.

ಅಗಷ್ಟೇ ಸಲ್ಲಬೇಕಿರೋವ್ರಿಗೆ ಸಲ್ಲುವುದು... ಅಪಾತ್ರರಿಗೆ ಸಲ್ಲದಿರುವಂತೆ ಮಾಡುವುದು ಸಾಧ್ಯ. ಆಸ್ಪತ್ರೆಯಂಥ ಜೀವ ಉಳಿಸುವ ಜಾಗದಲ್ಲಿ ಬಿಪಿಎಲ್ ಕಾರ್ಡ್ ಜೀವದೊಂದಿಗೆ ಆಟವಾಡುವ ವಸ್ತುವಾಗಿದೆ ಎಂಬುದು ಅತ್ಯಂಥ ವಿಷಾದನೀಯ ಮತ್ತು ಅಸಹ್ಯಕರ ಸಂಗತಿ.

ತನ್ನ ಆದಾಯವನ್ನು ಪ್ರಾಮಾಣಿಕವಾಗಿ ತೋರ್ಪಡಿಸುವವನಿಗೆ, ಪ್ರಾಮಾಣಿಕವಾಗಿ ಟ್ಯಾಕ್ಸ್ ಕಟ್ಟುವವನಿಗೆ, ಸಿಲಿಂಡರ್ ಸಬ್ಸಿಡಿ ಸರೆಂಡರ್ ಮಾಡುವವನಿಗೆ, ಬಿಪಿಎಲ್ ಕಾರ್ಡ್ ವಾಪಸ್ ಮಾಡುವವನಿಗೆ ಇಲ್ಲಿ ಯಾವ ಬೆಲೆಯೂ ಇಲ್ಲ ಎಂದೆನಿಸಿದಾಗ ಯಾತಕ್ಕೋಸ್ಕರ ಪ್ರಾಮಾಣಿಕರಾಗಿರಬೇಕು ಅನಿಸದಿರದು. ಮಗಳ ಪ್ರಾಣ ಉಳಿಸಿಕೊಳ್ಳಲು ಪರದಾಡುತ್ತಿದ್ದ ಗೆಳೆಯನಿಗೂ ತಾನ್ಯಾಕೆ ಅನಗತ್ಯ ಪ್ರಾಮಾಣಿಕನಾಗಿಬಿಟ್ಟೆ ಅನಿಸಿದ್ದು ತಪ್ಪಲ್ಲ. ಹಾಗನಿಸುವಂತೆ ಮಾಡಿದ ವ್ಯವಸ್ಥೆಗೊಂದು ಧಿಕ್ಕಾರವಿರಲಿ.

– **ನವೀನ್** ಸಾಗರ್

## ಎಂಥ ವ್ಯವಸ್ಥೆ ಇದು?

- ನಕಲಿ ಬಿಪಿಎಲ್ ಕಾರ್ಡ್ ಹೊಂದಿದವರಿಗೆ ಶಿಕ್ಷೆ, ಕಾರ್ಡ್ ಹೊಂದಿರುವ ಅನರ್ಹರ ಕಾರ್ಡ್ ಜಪ್ತಿ ಅಂತ.
- ಇದು ಯಾವತ್ತಿಗೂ ಚಾಲ್ತಿಯಲ್ಲಿರುವ ನಿರಂತರ ನಾಟಕವಷ್ಟೆ.
- ಲಕ್ಷಕ್ಕೊಬ್ಬ ಪ್ರಾಮಾಣಿಕ ಅಥವಾ ಶಿಕ್ಷೆಯ ಭಯಕ್ಕೆ ಒಳಗಾದವ ಕಾರ್ಡ್ ಹಿಂದಿರುಗಿಸುತ್ತಾ ನಷ್ಟೆ.
- ಪ್ರತಿದಿನವೂ ಅನರ್ಹರಿಗೆ ಬಿಪಿಎಲ್ ಕಾರ್ಡ್ ಕೊಡಿಸಲಾಗುತ್ತದೆ.
- ಚಾಪೆ ರಂಗೋಲಿಯೊಳಗೆ ತೂರುವುದನ್ನು ಬ್ರೋಕರ್‌ಗಳು, ಅಧಿಕಾರಿಗಳು ಕಲಿತಿರುತ್ತಾರೆ.
- ಅವರು ಎಂಥ ಕೋಟ್ಯಧೀಶನಿಗೂ ಬಿಪಿಎಲ್ ಕಾರ್ಡ್ ಕೊಡಿಸಬಲ್ಲರು.
- ಕಡುಬಡವನಿಗೂ ಬಿಪಿಎಲ್ ಕಾರ್ಡ್ ಸಿಗದಂತೆ ಮಾಡಬಲ್ಲರು.
- ಒಮ್ಮೆ ಈ ಕಾರ್ಡ್ ಹಿಂದಿನ ಲಾಜಿಕ್ ಬಗ್ಗೆ ನೋಡೋಣ.
- ಟಿವಿ, ಬೈಕು, ಫ್ರಿಜ್ಜು ಇರೋಮ್ರು ಬಿಪಿಎಲ್ ಕಾರ್ಡಿಗೆ ಅನರ್ಹರು ಅಂತ ಒಮ್ಮೆ ಘೋಷಣೆಯಾಗಿತ್ತು. ಎಂಥ ತುಂಬ ಮೂರ್ಖ ಘೋಷಣೆ ಅಲ್ಲವೇ ಇದು?
- ಸರಿಯಾಗಿ ನೋಡೋದಾದರೆ ಬಿಪಿಎಲ್ ಕಾರ್ಡುಗಳನ್ನು ಹೊಂದಿರುವ ಶೇಕಡಾ ಎಪ್ಪತ್ತರಷ್ಟು ಮಂದಿ ಅನರ್ಹರೇ.
- ಯಾವುಯಾವುದೋ ಬೇಸಿಸ್ಸಲ್ಲಿ.
- ಸ್ಥಳೀಯ ರಾಜಕಾರಣಿಗಳ ಬ್ರೋಕರ್‌ಗಳ ಫುಡ್ ಆಫೀಸ್ ಸಿಬ್ಬಂದಿ ಸಹಾಯದಿಂದ ಒಳದಾರಿಯಲ್ಲಿ ಬಿಪಿಎಲ್ ಕಾರ್ಡ್ ಮಾಡಿಸಿಕೊಂಡಿರುವ ಉದಾಹರಣೆಗಳೇ ಹೆಚ್ಚು
- ಫಸ್ಟ್ ಆಫ್ ಆಲ್... ಭಾರತದಲ್ಲಿ ಬಡತನ ರೇಖೆಯ ಮಾನದಂಡವೇ ನೆಟ್ಟಗಿಲ್ಲ.
- ಇಲ್ಲಿ ಲೋ ಇನ್ ಕಮ್ ಲೆವೆಲ್ ಅನ್ನೋದನ್ನೇ ತುಂಬ ಅವೈಜ್ಞಾನಿಕವಾಗಿ ಅತಾರ್ಕಿಕವಾಗಿ ನಿಗದಿ ಪಡಿಸಲಾಗಿದೆ.
- ಅಷ್ಟೊಂದು ಕಡಿಮೆ ಆದಾಯ ಯಾರಿಗೂ ಇರಲು ಸಾಧ್ಯವೇ ಇಲ್ಲ.
- ದೇಶ ನಿಗದಿಪಡಿಸಿರುವ ಆ ಲೋ ಇನ್ ಕಮ್ ಕೂಡ ದುಡಿಯಲಾರದವ ನನ್ನ ಪ್ರಕಾರ ಭೂಮಿ ಮೇಲೆ ಬದುಕುವುದಕ್ಕೇ ಅನರ್ಹ.

**ಕೇಳುಗರಿಗೆ ಆ ವ್ಯಕ್ತಿಯು ಯಾವುದೋ ವಿದೇಶಿ ಮೂಲದವನೆಂದೋ ಅಥವಾ ಹೊಸದಾಗಿ ಆ ಭಾಷೆಯನ್ನು ಕಲಿತವನೆಂದೋ ಭಾಸವಾಗುತ್ತದೆ. ಉದಾಹರಣೆಗೆ, ಅಪ್ಪಟ ಕನ್ನಡ ಮಾತನಾಡುವ ವ್ಯಕ್ತಿಯೊಬ್ಬ ಮಿದುಳಿನ ಪೆಟ್ಟಿನ ನಂತರ ಅಮೆರಿಕನ್ ಇಂಗ್ಲಿಷ್ ಶೈಲಿಯ ಅಥವಾ ಚೈನೀಸ್ ಶೈಲಿಯ ಕನ್ನಡ ಮಾತನಾಡಲು ಶುರು ಮಾಡಬಹುದು.**

# ಹಠಾತ್ ನಿಮ್ಮ ಉಚ್ಚಾರ ಬದಲಾದರೆ?

ಸಂಪಾದಕರ ಸದ್ಯಶೋಧನೆ

ಜಗತ್ತಿನಲ್ಲಿ ಎಷ್ಟೋ ವಿಚಿತ್ರ ಕಾಯಿಲೆಗಳಿವೆ. ಆದರೆ ಒಬ್ಬ ವ್ಯಕ್ತಿ ತಾನು ಕಲಿಯದ, ಹೋಗದ ದೇಶದ ಭಾಷೆಯ ಉಚ್ಚಾರಣೆಯಲ್ಲಿ ಮಾತನಾಡತೊಡಗುವುದು ಅತ್ಯಂತ ಅಪರೂಪದ ವಿದ್ಯಮಾನ. ಇದನ್ನು ವೈದ್ಯಕೀಯ ಲೋಕದಲ್ಲಿ ಫಾರಿನ್ ಆಕ್ಸೆಂಟ್ ಸಿಂಡ್ರೋಮ್ ಎಂದು ಕರೆಯುತ್ತಾರೆ.

ಇದು ಕೇವಲ ಭಾಷೆಯ ಸಮಸ್ಯೆಯಲ್ಲ, ಬದಲಿಗೆ ಮಿದುಳಿನ ಸಂಕೀರ್ಣ ಕಾರ್ಯ ಚಟುವಟಿಕೆಗೆ ಸಂಬಂಧಿಸಿದ ಒಂದು ಗಂಭೀರ ಸ್ಥಿತಿ. ಏನಿದು ಫಾರಿನ್ ಆಕ್ಸೆಂಟ್ ಸಿಂಡ್ರೋಮ್? ಇದು ಒಂದು ಅಪರೂಪದ ಸ್ಪೀಚ್ ಡಿಸಾರ್ಡರ್ (ಮಾತಿನ ಅಸ್ವಸ್ಥತೆ). ಇಲ್ಲಿ ವ್ಯಕ್ತಿಯು ತನ್ನ ಮಾತೃಭಾಷೆಯನ್ನೇ ಮಾತನಾಡುತ್ತಿರುತ್ತಾನೆ, ಆದರೆ ಅವನ ಮಾತಿನ ಶೈಲಿ, ಸ್ವರದ ಏರಿಳಿತ ಮತ್ತು ಉಚ್ಚಾರಣೆಗಳು ಸಂಪೂರ್ಣವಾಗಿ ಬದಲಾಗಿರುತ್ತವೆ.

ಕೇಳುಗರಿಗೆ ಆ ವ್ಯಕ್ತಿಯು ಯಾವುದೋ ವಿದೇಶಿ ಮೂಲದವನೆಂದೋ ಅಥವಾ ಹೊಸದಾಗಿ ಆ ಭಾಷೆಯನ್ನು ಕಲಿತವನೆಂದೋ ಭಾಸವಾಗುತ್ತದೆ. ಉದಾಹರಣೆಗೆ, ಅಪ್ಪಟ ಕನ್ನಡ ಮಾತನಾಡುವ ವ್ಯಕ್ತಿಯೊಬ್ಬ ಮಿದುಳಿನ ಪೆಟ್ಟಿನ ನಂತರ ಅಮೆರಿಕನ್ ಇಂಗ್ಲಿಷ್ ಶೈಲಿಯ ಅಥವಾ ಚೈನೀಸ್ ಶೈಲಿಯ ಕನ್ನಡ ಮಾತನಾಡಲು ಶುರು ಮಾಡಬಹುದು.

ಇಲ್ಲಿ ವ್ಯಕ್ತಿಗೆ ತಾನು ವಿದೇಶಿ ಶೈಲಿಯಲ್ಲಿ ಮಾತನಾಡುತ್ತಿದ್ದೇನೆ ಎಂಬ ಅರಿವಿರುವುದಿಲ್ಲ, ಆದರೆ ಕೇಳುವವರಿಗೆ ಆ ಸ್ಪಷ್ಟವಾಗಿ ವ್ಯತ್ಯಾಸ ತಿಳಿಯುತ್ತದೆ. ಈ ಸಿಂಡ್ರೋಮ್ ಮೊಟ್ಟ ಮೊದಲು ಜಗತ್ತಿನ ಗಮನ ಸೆಳೆದಿದ್ದು 1941ರಲ್ಲಿ, ಎರಡನೇ ಮಹಾಯುದ್ಧದ ಸಮಯದಲ್ಲಿ.

ನಾರ್ವೆ ದೇಶದ ಮಹಿಳೆಯೊಬ್ಬಳು ವಾಯುದಾಳಿಯ ವೇಳೆ ಮಿದುಳಿಗೆ ಪೆಟ್ಟು ಮಾಡಿ ಕೊಂಡಳು. ಚೇತರಿಸಿಕೊಂಡ ನಂತರ ಆಕೆ ಜರ್ಮನ್ ಉಚ್ಚಾರಣೆಯಲ್ಲಿ ನಾರ್ವೇಜಿಯನ್ ಭಾಷೆ ಮಾತನಾಡಲು ಶುರು ಮಾಡಿದಳು. ಆಗ ನಾರ್ವೆ ಮತ್ತು ಜರ್ಮನಿ ನಡುವೆ ಯುದ್ಧ ನಡೆಯುತ್ತಿದ್ದ ಕಾರಣ, ಆಕೆಯನ್ನು ಜರ್ಮನ್ ಗೂಢಚಾರಿ ಎಂದು ಭಾವಿಸಿ ಸಮಾಜದಿಂದ ಬಹಿಷ್ಕರಿಸಲಾಗಿತ್ತು.

ಅಂದಿನಿಂದ ಈ ಸ್ಥಿತಿಯ ಬಗ್ಗೆ ಸಂಶೋಧನೆಗಳು ತೀವ್ರಗೊಂಡವು. ಇದಕ್ಕೆ ಕಾರಣಗಳೇನು? ಫಾರಿನ್ ಆಕ್ಸೆಂಟ್ ಸಿಂಡ್ರೋಮ್ ಸಾಮಾನ್ಯವಾಗಿ ಮಿದುಳಿನ ಬ್ರೋಕಾಸ್ ಏರಿಯಾ ಎಂಬ ಭಾಗಕ್ಕೆ ಹಾನಿಯಾದಾಗ ಸಂಭವಿಸುತ್ತದೆ. ಈ ಭಾಗವು ನಾವು ಮಾತನಾಡುವ ಪದಗಳ ಉಚ್ಚಾರಣೆ ಮತ್ತು ಸ್ವರವನ್ನು ನಿಯಂತ್ರಿಸುತ್ತದೆ.

ಇದಕ್ಕೆ ಪ್ರಮುಖ ಕಾರಣಗಳೆಂದರೆ, ಮಿದುಳಿಗೆ ರಕ್ತ ಸಂಚಾರ ಸ್ಥಗಿತಗೊಂಡಾಗ ಭಾಷಾ ನಿಯಂತ್ರಣದ ಭಾಗಕ್ಕೆ ಹಾನಿಯಾಗಬಹುದು. ಅಪಘಾತ ಅಥವಾ ತಲೆಗೆ ಬಲವಾದ ಪೆಟ್ಟುಬಿಗ ಹೀಗೆ ಆಗಬಹುದು. ಮಿದುಳಿನ ಒಳಗೆ ಗಡ್ಡೆಗಳಾದಾಗಲೂ ಹೀಗೆ ಆಗಬಹುದು. ಕೆಲವು ಅಪರೂಪದ ಸಂದರ್ಭಗಳಲ್ಲಿ ತೀವ್ರವಾದ ಮಾನಸಿಕ ಆಘಾತ ಅಥವಾ ಖಿನ್ನತೆಯಿಂದಲೂ ಈ ರೀತಿ ಆಗಬಹುದು. ಈ ಬದಲಾವಣೆಗಳು ಹೇಗಿರುತ್ತವೆ? ಫಾರಿನ್ ಆಕ್ಸೆಂಟ್ ಸಿಂಡ್ರೋಮ್ ಪೀಡಿತರು ಸ್ವರಾಕ್ಷರಗಳನ್ನು ದೀರ್ಘವಾಗಿ ಎಳೆಯುತ್ತಾರೆ ಅಥವಾ ಅನಗತ್ಯವಾಗಿ ಕಿರಿದಾಗಿಸುತ್ತಾರೆ.

ಪದಗಳ ನಡುವೆ ಅಸಹಜ ವಿರಾಮ ನೀಡುತ್ತಾರೆ. ವಾಕ್ಯದ ಕೊನೆಯಲ್ಲಿ ಸ್ವರದ ಏರಿಳಿತ ಬದಲು ಮಾಡುತ್ತಾರೆ. ಉದಾಹರಣೆಗೆ, ಸಾಮಾನ್ಯ ವಾಕ್ಯವು ಪ್ರಶ್ನೆಯಂತೆ ಕೇಳಿಸುತ್ತದೆ. ಕೆಲವು ಅಕ್ಷರಗಳನ್ನು ಉಚ್ಚರಿಸಲು ಕಷ್ಟಪಡುತ್ತಾರೆ ಅಥವಾ ತಪ್ಪಾಗಿ ಉಚ್ಚರಿಸುತ್ತಾರೆ.

ಇದಕ್ಕೆ ಯಾವುದೇ ನಿರ್ದಿಷ್ಟ ಶಸ್ತ್ರಚಿಕಿತ್ಸೆ ಅಥವಾ ಮಾತ್ರೆಗಳಿಲ್ಲ. ಆದರೆ ಚಿಕಿತ್ಸೆಯು ಹಾನಿಯ ತೀವ್ರತೆಯ ಮೇಲೆ ನಿರ್ಧಾರವಾಗುತ್ತದೆ. ವಾಕ್‌ಶ್ರವಣ ತಜ್ಞರು ರೋಗಿಗೆ ಹಳೆಯ ಉಚ್ಚಾರಣೆಯನ್ನು ಮರಳಿ ಪಡೆಯಲು ತರಬೇತಿ ನೀಡುತ್ತಾರೆ.

ನಾಲಿಗೆಯ ಚಲನೆ ಮತ್ತು ಸ್ವರದ ಮೇಲೆ ಕೆಲಸ ಮಾಡಲಾಗುತ್ತದೆ. ಫಾರಿನ್ ಆಕ್ಸೆಂಟ್ ಸಿಂಡ್ರೋಮ್ ನಿಂದ ಬಳಲುವವರು ದೈಹಿಕ ನೋವಿಗಿಂತ ಹೆಚ್ಚಾಗಿ ಸಾಮಾಜಿಕ ಮುಜುಗರ ಅನುಭವಿಸುತ್ತಾರೆ. ಜನರು ಅವರನ್ನು ನಟನೆ ಮಾಡುತ್ತಿದ್ದಾರೆ ಅಥವಾ ಗಮನ ಸೆಳೆಯಲು ಹೀಗೆ ಮಾಡುತ್ತಿದ್ದಾರೆ ಎಂದು ಕಿಚಾಯಿಸುತ್ತಾರೆ.

ಸ್ವಂತ ಕುಟುಂಬದವರಿಗೂ ಆ ಧ್ವನಿ ಅಪರಿಚಿತವಾಗಿ ಕೇಳಿಸುವುದರಿಂದ ರೋಗಿಯು ಏಕಾಂಗಿತನಕ್ಕೆ ಜಾರುವ ಸಾಧ್ಯತೆ ಇರುತ್ತದೆ. ಈ ಕಾಯಿಲೆ ಇರುವವರ ಬಗ್ಗೆ ಸಹಾನುಭೂತಿ ತೋರಿಸುವುದು ಮತ್ತು ಇದು ನರಮಂಡಲದ ಸಮಸ್ಯೆಯೇ ಹೊರತು ನಟನೆಯಲ್ಲ ಎಂಬುದನ್ನು ಸಮಾಜ ಅರ್ಥಮಾಡಿಕೊಳ್ಳಬೇಕಿದೆ.

ಜಗತ್ತಿನಲ್ಲಿ ಇದುವರೆಗೆ ಕೇವಲ ನೂರೈವತ್ತು ಪ್ರಕರಣಗಳು ಮಾತ್ರ ಅಧಿಕೃತವಾಗಿ ದಾಖಲಾಗಿವೆ. ಇದು ಅತ್ಯಂತ ಅಪರೂಪದ ಸ್ಥಿತಿಯಾಗಿದ್ದರೂ, ವೈದ್ಯಕೀಯ ವಿಜ್ಞಾನಕ್ಕೆ ಮಿದುಳಿನ ಕಾರ್ಯವೈಖರಿಯ ಬಗ್ಗೆ ಹೊಸ ಸವಾಲನ್ನು ಸೃಷ್ಟಿಸಿದೆ.

– **ವಿಶ್ವೇಶ್ವರ** ಭಟ್



# ಆಕಿ ಅಂದ್ರ ಅಕ್ಷರ ಕಲಿಸಿದಾಕಿ

**» ಫುಲೆ ಶಾಲೆಯಲ್ಲಿ ಕಲಿತಂತಹ ಹೆಣ್ಣು ಮಕ್ಕಳು ವೈಚಾರಿಕವಾಗಿ ಚಿಂತನೆ ಮಾಡುವಷ್ಟು ಬೆಳೆದು ಬರಹಗಾರರಾದ್ರು, ಅದ್ರಲ್ಲಿ ಭಾರತದ ಮೊಟ್ಟ ಮೊದಲ ಸ್ತ್ರೀವಾದಿ ಲೇಖಕಿ ತಾರಾಬಾಯಿ ಶಿಂಧೆ ಅವರು ಸಾವಿತ್ರಿಬಾಯಿ ಫುಲೆ ಅವರ ಶಿಷ್ಯೆ ಆಗಿದ್ರು, ಈ ರೀತಿಯಾಗಿ ಅದೆಷ್ಟೋ ವಿರೋಧಗಳ ನಡುವೆ ತಮ್ಮ ಸಮಾಜ ಸುಧಾರಣೆಯನ್ನ ಮುಂದುವರಿಸಿದರು. ಈ ಪಾಠದಿಂದ ಗೊತ್ತಾಗೋದೇನಂದ್ರೆ ಶಿಕ್ಷಣಕ್ಕೆ ಯಾವ ಜಾತಿಯ ಹಂಗೂ ಇಲ್ಲ, ಕಲಿಯುವ ಮನಸ್ಸಿದ್ರೆ ಎಂಥವರೂ ಕಲಿತು ಸಾಧನೆ ಮಾಡಬಹುದು ಅಂತ ಹೇಳುವಷ್ಟರಲ್ಲಿ ಬೆಲ್ ಆಗಿ ಊಟಕ್ ಬಿಟ್ಟಿತ್ತು, ಮೇಡಂ ಕೂಡ ಆಫಿಸ್ ರೂಮ್ ಕಡೆ ಹೆಜ್ಜೆ ಹಾಕಿದ್ರು.**

ಈ ನೀಲಿ ಸಾಲಿ ಅಂಗಿ ಹಾಕಿ, ಕ್ಲಾಸಿನೊಳಾಗ ಲೀಡರ್ ಆಗಿ, ಹತ್ತಕ್ಕತ್ತು ಮಾರ್ಕ್ಸ್ ತಗೊಂಡಾಗ, ಅಡಗಿ ಮನಿಯೊಳಾಗ ನನ್ನ ಪಾಠ ಕೇಳ್ತಿದ್ದ ಒಲಿ, ಉದಗೊಳವಿ, ಕಂಬ, ಕಿಡಕಿ, ಗಂಗಾಳ, ಕಸಬಾರಿಗಿ, ಬೂದಿ, ವಿಜ್ಜಮ್ಮಕ್ಕ, ಇವೆಲ್ಲಾನೂ ನಾ ಒಳ್ಳೆ ಮಾರ್ಕ್ಸ್ ತಗದಿದ್ದಕ್ಕ ಖುಷಿ ಪಡ್ಬೊದಲಾ ಅಂತ ನೆನೆಸಿಕೊಂಡು ಒಳಗೊಳಗೆ ಖುಷಿಯಾಗೋದು. ಹಾಗೆ ಸಾಲಿಯೊಳಾಗ ಪ್ರೇಯರ್ ನೀನಾ ಮಾಡಿಸ್ಬೇಕು ಇನ್ಮೆಲಿಂದ ಅಂತ ಸರ್ ಹೇಳಿದಾಗ ಮತ್ತಷ್ಟು ಹಿಗ್ಗಿದ್ದೆ. ಹೀಗೆ ಪ್ರೇಯರ್ ಮಾಡಿಸುವಾಗ

ಭಾರತೀಯರಾದ ನಾವೆಲ್ಲರೂ ಸಮಾನರು ಅಂತ ಒತ್ತಿ ಒತ್ತಿ ಹೇಳಸ್ತಿದ್ರು, ಆಗೆಲ್ಲಾ ಮತ್ತದೆ ಪ್ರಶ್ನೆ ಸುಳದಾಡೋದು

ಈ ಎಲ್ಲಾ ಸಮಾನರೊಳಾಗ ಆಕಿನೂ ಇರಬಹುದಾ? ಅಂತ!

ಹಿಂಗ ಆಕಿ ಅನ್ನೊ ಜೇನುಹುಳ ಗುಂಯ್ ಗುಟ್ಟೋದು ನಿಲ್ಲದ ಅಕಿನ ಬೆನ್ನತ್ತಿ ಗೊತ್ತಿಲ್ದನ ನಾ ಅಕಿನ ಅಲ್ಲಿಲ್ಲಿ ಹುಡುಕೋದು ನಡಿತಿತ್ತು. ಪ್ರೇಯರ್ ಎಲ್ಲಾ ಮುಗದ್ ಮ್ಯಾಗ ನಾನು ಗಂಗಾ ಯಾವಾಗ್ಲೂ ಕ್ಲಾಸಿನೊಳಾಗ ಫಸ್ಟ್ ಲೈನಿಗೆ ಕುಂದ್ರಬೊಕು ಅಂತ ಓಡ್ಯ ಹೋಗಿ ಬ್ಯಾಗಿಡ್ತಿದ್ವಿ, ಸಾಲ್ಯಾಗ ಕೆಳಾಗ ನೆಲದ ಮ್ಯಾಗ ಕುಂದ್ರತಿದ್ವಿ, ಕಪ್ಪು ಸಬಾದಿ ಬಂಡಿ ಚಚ್ಚೌಕದ ನಡಕ ಬ್ಯಾಗಿಟ್ಟು ಕುಂತಾಗ ಅದೊಂಥರಾ ಖುಷಿ ಅನ್ಸೊದು. ನಮಗ್ ಪಾಠ ಮಾಡ್ತಿದ್ದ ಸರಸ್ವತಿ ಟೀಚರ್, ಬಂದಾಗೊಮ್ಮಿ ಮುಖ ನೋಡಿ ನಕ್ಕು, ಕಂಡಾಗೆಲ್ಲ ಪ್ರೀತಿಯಿಂದ ನೋಡ್ರಿ ನೀವ್ ಹುಡಗ್ಯಾರೆಲ್ಲ ಬರೀ ಮನ್ಯಾಗ ಮುಸುರಿ ತಿಕ್ಕಿದ್ಯ, ಹೊಲದಾಗ ಕಸಾ ತಗ್ಯಾಕ ಹೋಗಿದ್ಯ, ಅವ್ವ ಹೊಲಕ್ಕ ಹೋಗ್ಯಾಳ ನಾ ಮನ್ಯಾಗ ತಮ್ಮ ತಂಗಿನ ನೋಡಿಕ್ಯಬೊಕು, ಅಡಗಿ ಮಾಡಬೊಕು ಅಂತ್ಹೇಳಿ ಸಾಲಿಗೆ ಬರಾದು ಬಿಡಬೇಡ್ರಿ, ಹುಡುಗ್ಯಾರಾಗಿ ನೀವ್ ಮೊದ್ಲು ಸಾಲಿ ಕಲಿಬೊಕು, ಅಂತ ಯಾವಾಗಲೂ ಹೇಳೊರು. ಅವರು ಹಂಗೆಲ್ಲಾ ಹೇಳುವಾಗ ಸಾಲಿ ಕಲಿಬೊಕು ಅನ್ನೊ ಉತ್ಸಾಹ ಇನ್ನೂ ಹೆಚ್ಚಾಗೊದು.

ಅವತ್ತೊಂದಿನ ಸರಸ್ವತಿ ಟೀಚರ್ ಕ್ಲಾಸಿಗೆ ಬಂದದ್ದೆ ಬೋರ್ಡಿನ ಮ್ಯಾಗ ದಪ್ಪ ಅಕ್ಷರದೊಳಗ ಸಾವಿತ್ರಿಬಾಯಿ ಫುಲೆ ಅಂತ ಬರದಾಗ, ಮೇಡಂ ಯಾರದೊ ಹೆಸ್ರು ಬರದಾರಲ ಯಾರ್ ಆಕಿ ಅಂತ ಮತ್ತೆ ತಲಿ ಕೆಡಿಸಿಕೊಂಡಾಗ ಪಾಠ ಶುರು ಮಾಡಿದ್ರು.

ಮಕ್ಕಳಾ ಇವತ್ತು ನಾನು ನಿಮಗೆಲ್ಲಾ ಮೂರನೇ ಲೆಸನ್ ಸಾವಿತ್ರಿಬಾಯಿ ಫುಲೆ ಕಲಸ್ತಿನಿ, ನೋಡಿ ಮಕ್ಳಾ..!

ಹೀಗೆ ಒಂದೂವರೆ ಶತಮಾನಗಳ ಹಿಂದೆ ಆಗಿನ್ನೂ ಸ್ವಾತಂತ್ರ್ಯ ಚಳವಳಿ ರೂಪಗೊಳ್ತಿದ್ದ ಕಾಲ ಅದು; ಗಾಂಧಿ, ಅಂಬೇಡ್ಕರ್ ಅಂತಹ ದೂರದೃಷ್ಟಿಯ ಜನನಾಯಕರು ಹುಟ್ಟಿರಲಿಲ್ಲ. ಆಳುವವರ ನಿರಂತರ ಬದಲಾವಣೆಯಿಂದ ಸಮಾಜ ತನ್ನ ಸ್ವವಿಮರ್ಶೆಯನ್ನ ಮರೆತಿದ್ದಂತಹ ಕಾಲ. ಬಂಗಾಳ ಮತ್ತೆ ಭಾರತದ ಇನ್ನಿತರ ಭಾಗಗಳಲ್ಲಿ ಸಮಾಜ ಸುಧಾರಕರು ಇಂಗ್ಲಿಷ್ ಶಿಕ್ಷಣ ಪಡೆದು ಆಗಷ್ಟೇ ಭಾರತದ ಸಾಮಾಜಿಕ ಅನಿಷ್ಟಗಳ ಬಗ್ಗೆ ಮಾತನಾಡತೊಡಗಿದ್ದರು. ಅನಿಷ್ಟ ಪದ್ಧತಿಗಳು ಅಂದ್ರ ಬಾಲ್ಯವಿವಾಹ, ಸತಿ ಪದ್ಧತಿ. ಮತ್ತ ಆ ಕಾಲದಾಗ ಸಾಲಿ ಕಲಿಯೊಕೆ ತಾವಷ್ಟೆ ಅರ್ಹರು ಅನ್ಕೊಂಡಿದ್ದ ಜಾತಿಗಳ



ಹೊರತು ಮತ್ಯಾರಿಗೂ ಕಲಿಯೊಕೆ ಅವಕಾಶಾನೆ ಇರಲಿಲ್ಲ, ಸಮಾಜದ ಕೆಲವೊಂದು ವರ್ಗಗಳಿಗೆ ಮಾತ್ರ ಶಿಕ್ಷಣ ಮೀಸಲಾಗಿತ್ತು. ಇನ್ನೂ ಮಹಿಳೆಯರ ಶಿಕ್ಷಣದ ಬಗ್ಗೆ ಮಾತಾಡೊ ಹಾಗಿರಲಿಲ್ಲ ಅವರಿಗೆ ಅದರ ಅವಕಾಶಗಳೇ ಇರಲಿಲ್ಲ. ಹೆಣ್ಣು ಅಕ್ಷರ ಕಲಿತ್ರೆ ಎಲ್ಲಾರಿಗೂ ಪತ್ರ ಬರಿತಾಳೆ, ಆಗ ಅವಳ ಗಂಡ ತಿನ್ನೊ ಅಗುಳು ಹುಳ ಆಗಿ ಅವನು ಖಾಯಿಲೆ ಬಿದ್ದು ಸತ್ತೊಗ್ತಾನೆ ಅನ್ನೊ ನಂಬಿಕೆ ಇತ್ತು, ಈ ತರದ ಅಂಥ ನಂಬಿಕೆಗಳಿಂದಾನೆ ಹುಡುಗಿಯರಿಗೆ ಶಿಕ್ಷಣ ಕೊಡಿಸೊಕೆ ಕಳಿಸ್ತಾ ಇರಲಿಲ್ಲ, ಚಿಕ್ಕ ವಯಸ್ಸಲ್ಲಿ ಮದುವೆ ಮಾಡ್ತಾ ಇದ್ರು.

ಮೇಡಂ ಈ ಚಿಕ್ಕ ವಯಸ್ಸಲ್ಲಿ ಮದುವೆ ಮಾಡ್ತಾರೆ ಅಂದ ತಕ್ಷಣ ನಾ ಗೌರಿ ಕಡೆ ತಿರುಗಿದೆ, ಅವಳ ಕೊಳ್ಳಾಗ ತಾಳಿ ಇತ್ತು ಅಂದ್ರ ಆಕಿದೂ ಹಿಂಗ ಬಾಲ್ಯ ವಿವಾಹ ಆಗಿರಬೊಕು ಅನ್ಕೊಂಡೆ, ಗೌರಿ ಅದೇನೊ ಮುಜುಗರಗೊಂಡಂಗ ತಾಳಿನ ಕೊಳ್ಳಪಟ್ಟಿ ಹಿಂದ ಅಡಗಿಸಿ ಕುಂತ್ಲು. ಮೇಡಂ ಪಾಠ ಮುಂದುವರೆಸಿ ಮಕ್ಳಾ ಹಿಂಗ ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲೇ ಮದುವೆ ಆಗಿ ತನ್ನ ಬಾಲ್ಯದ ಮುಗ್ಧತೆಯಲ್ಲಿ ಜಗತ್ತನ್ನ ನೋಡುವ ಹೊತ್ತಿಗೆ ಯಾರದೊ ಹೆಂಡತಿಯಾಗಿ, ಸೊಸೆಯಾಗಿ, ಕೊನೆಗೆ ಅವ್ವ ಆಗಿರ್ತಿದ್ಲು. ಅವಳ ಬಾಲ್ಯ ಎಲ್ಲಾನೂ ಕುಟುಂಬ ನಿರ್ವಹಣೆಗೆ ನಡುವೆ ಅದರ ಜವಾಬ್ದಾರಿಗಳಲ್ಲೆ ಕಳದು ಹೋಗ್ತಿತ್ತು. ಹೆಣ್ಣು ಮಕ್ಕಳು ಯಾವತ್ತೂ ಪ್ರಶ್ನೆ ಮಾಡಬಾರದಂತೆ, ಹೊರುವ, ಹೆರುವ, ಪೊರೆಯುವ ಕೆಲಸಗಳಿಗೆ ಅವಳನ್ನ ಸೀಮಿತ ಮಾಡ್ತಿದ್ರು, ಇನ್ನೂ ದಲಿತರು, ಶೂದ್ರ ಮಹಿಳೆಯರಿಗೆ ಶಿಕ್ಷಣ ಅನ್ನೋದು ಕನಸಿನ ಮಾತಾಗಿತ್ತು.

ಹೀಗಿರುವಾಗ ಮಹಾರಾಷ್ಟ್ರದ ಹಳ್ಳಿಯಲ್ಲಿ ಹುಟ್ಟಿದ ಸಾವಿತ್ರಿಬಾಯಿ ಫುಲೆ, ಒಂಬತ್ತನೇ ವಯಸ್ಸಿಗೆ ವ'ಂದ'ಂವ' ಆ ಗಿ ಗ'ಂಡ'ನ ವ'ಂನ'



ಸೇರಿರುತ್ತಾರೆ. ಆದ್ರೆ ಅವರು ಮದುವೆ ಆಗಿದ್ದವರ ಜ್ಯೋತಿ ಬಾ ಫುಲೆ ಅವರು ಸಾಮಾನ್ಯನಾಗಿರಲಿಲ್ಲ, ಯಾಕಂದ್ರೆ ಆಗಿನ ಕಾಲದಲ್ಲಿ ಅವರು ಇಂಗ್ಲಿಷ್ ಶಿಕ್ಷಣ ಪಡೆದು, ಶಿಕ್ಷಣದ ಮಹತ್ವ ತಿಳಿದವರಾಗಿದ್ರು. ಸಾವಿತ್ರಿ ಚಿಕ್ಕ ವಯಸ್ಸಿಗೆ ಮದುವೆ ಆಗಿದ್ರಿಂದ ಅವಳಿಗೆ ಜ್ಯೋತಿ ಬಾ ಫುಲೆ ಅವರೆ ಮೊದಲ ಶಿಕ್ಷಕರಾಗಿದ್ರು. ಹೆಣ್ಣುಮಕ್ಕಳ ಶಿಕ್ಷಣದ ಮಹತ್ವ ತಿಳಿದ ಅವರು ಮಹಿಳೆಯರಿಗಾಗಿಯೇ ಶಾಲೆ ತೆರೆದರು, ಅದೆಷ್ಟು ಹುಡುಕಿದರೂ ಶಿಕ್ಷಕಿಯರೇ ಸಿಗದಿದ್ದರಿಂದ ಸಾವಿತ್ರಿಬಾಯಿ ಫುಲೆ ಅವರು ಶಿಕ್ಷಕಿ ಆಗಿ ಒಂಭತ್ತು ವಿದ್ಯಾರ್ಥಿಗಳೊಂದಿಗೆ ಶಾಲೆ ತೆಗಿತಾರೆ. ಆದ್ರೆ ಶಾಲೆಗೆ ಜಾಗ ಕೊಡೊ ವಿಚಾರದೊಳಗ ಯಾರೂ ಮುಂದೆ ಬರದೆ ಇದ್ದಿದ್ದರಿಂದ ಶಾಲೆ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಬದಲಾಗ್ತಿತ್ತು.



ಆದ್ರೆ ಸಾವಿತ್ರಿಬಾಯಿ ಫುಲೆ ಅವರಿಗೆ ತಮ್ಮ ಕೆಲಸದಲ್ಲಿ ನಂಬಿಕೆ ಇತ್ತು, ದಾರಿಯಲ್ಲಿ ತೂರಿ ಬರುತ್ತಿದ್ದ ಕಲ್ಲು ಮಣ್ಣು ಸಗಣಿಗಳ ದಾಳಿಗೆ ಎದೆಗುಂದದೆ ಪಾಠ ಮಾಡಿ ಬರುತ್ತಿದ್ದರು, ಅದೆಷ್ಟೋ ಬೆದರಿಕೆಗಳಿಗೆ ಹೆದರದೇ ಹೆಣ್ಣು ಮಕ್ಕಳಿಗೆ ಪಾಠ ಮಾಡುತ್ತಿದ್ದು. ಇದರ ಫಲವಾಗಿ ಫುಲೆ ಶಾಲೆಯಲ್ಲಿ ಕಲಿತಂತಹ ಹೆಣ್ಣು ಮಕ್ಕಳು ವೈಚಾರಿಕವಾಗಿ ಚಿಂತನೆ ಮಾಡುವಷ್ಟು ಬೆಳೆದು ಬರಹಗಾರರಾದ್ರು, ಅದ್ರಲ್ಲಿ ಭಾರತದ ಮೊಟ್ಟ ಮೊದಲ ಸ್ತ್ರೀವಾದಿ ಲೇಖಕಿ ತಾರಾಬಾಯಿ ಶಿಂಧೆ ಅವರು ಸಾವಿತ್ರಿಬಾಯಿ ಫುಲೆ ಅವರ ಶಿಷ್ಯೆ ಆಗಿದ್ರು, ಈ ರೀತಿಯಾಗಿ ಅದೆಷ್ಟೋ ವಿರೋಧಗಳ ನಡುವೆ ತಮ್ಮ ಸಮಾಜ ಸುಧಾರಣೆಯನ್ನ ಮುಂದುವರಿಸಿದರು. ಈ ಪಾಠದಿಂದ ಗೊತ್ತಾಗೋದೇನಂದ್ರೆ ಶಿಕ್ಷಣಕ್ಕೆ ಯಾವ ಜಾತಿಯ ಹಂಗೂ ಇಲ್ಲ, ಕಲಿಯುವ ಮನಸ್ಸಿದ್ರೆ ಎಂಥವರೂ ಕಲಿತು ಸಾಧನೆ ಮಾಡಬಹುದು ಅಂತ ಹೇಳುವಷ್ಟರಲ್ಲಿ ಬೆಲ್ ಆಗಿ ಊಟಕ್ ಬಿಟ್ಟಿತ್ತು, ಮೇಡಂ ಕೂಡ ಆಫಿಸ್ ರೂಮ್ ಕಡೆ ಹೆಜ್ಜೆ ಹಾಕಿದ್ರು.

ಅವರು ಪಾಠ ಮಾಡಿ ಹೋದ್ಮ್ಯಾಲೇ ಆಕಿ ಅನ್ನೊ ಹುಳದ ಸದ್ದು ಇನ್ನಷ್ಟು ಜೋರಾಯ್ತು. ಆ ಬುಕ್ಕನ್ನ ತಗದು ಸಾವಿತ್ರಿಬಾಯಿ ಫುಲೆ ಅವರ ಫೋಟೋ ದಿಟ್ಟಿಸಿ ನೋಡ್ತಾ ಕುಂತಾಗ, ನಮ್ಮವ್ವನಂಗ ತಲಿತುಂಬ ಸೀರಿ ಸುತ್ತಿಗ್ಯಂಡು, ಹಣಿ ನಡುಕ ದೊಡ್ಡ ಟಿಕ್ಕಳಿ ಇಟ್ಟುಕೊಂಡು ನಮ್ಮಲ್ಲೆ ಇರೊ ಯಾರೊ ಹೆಣ್ಮಗಳಿರಬೇಕು ಅನ್ನಂಗ ಕಾಣ್ತಿದ್ರು. ಮೇಡಂ ಪಾಠ ಮಾಡುವಾಗ ಹೇಳಿದ ಜಾತಿ, ಹೆಣ್ಣುಮಕ್ಕಳ ಶಿಕ್ಷಣ, ಬಾಲ್ಯ ವಿವಾಹ, ನಾಕ್ ಗೋಡಿಯೊಳಾಗ ಸಿಕ್ಕಾಕೊಳ್ಳೊ ಅವರ ಬದುಕು, ನಮ್ಮೂರಾಗಿರ ಹೆಣ್ಮಕ್ಕಳ ಚಿತ್ರಗಳನ್ನ ಹಾದು ಹೋಗಂಗ ಮಾಡಿತು. ಗೌರಿ ಕೊಳ್ಳಾಗಿನ ತಾಳಿ, ನಾ ಆ ಊರಿನ ಗುಡಿಗೋದಾಗೆಲ್ಲ ನೀವು ಒಳಾಕ್ ಬರಂಗಿಲ್ಲ, ಕಾಯಿ ಒಡಸಾದಿದ್ರ ಅಲ್ಲೆ ಕಟ್ಟಿ ಮ್ಯಾಗಿಡ್ರಿ ಅಂತ ಪೂಜಾರಿ ಮುಖ ಹಿಂಡಿ ಮಾತಾಡೊದು, ಅದೆಷ್ಟು ಕಲತ್ರು ನೀವ್ ಲಾಸ್ಟ್ ಗಂಡನ್ ಮನಿಗೆ, ಹುಡುಗ್ಯಾರು ಜಾಸ್ತಿ ಮಾತಾಡಬಾರದು, ಹೆಣ್ಮಕ್ಕಳು ಅಂದ್ರ ನಯ ನಾಜೂಕಾಗಿ ನಡಕಾಬೊಕು, ಹೊಲದಾಗೂ ದುಡಿಬೊಕು, ಮನಿ ದಗದಾಗೂ ಮಾಡಬೊಕು, ರೊಟ್ಟಿನೂ ತಟ್ಟಬೊಕು, ಹೊಲದಾಗ ಮೈ ಬಗ್ಗಿಸಿ ಕಳೆ ಕಿತ್ತಾಕ ಕಸುವಿರಬೊಕು ಅನ್ನೊ ಧ್ವನಿಗಳೆಲ್ಲ ತಲಿ ತುಂಬಾ ಸುಳಿ ಸುತ್ತಿದಂಗ ಸುತ್ತಾಕತಿದ್ವು, ಪಾಠದೊಳಾಗಿರಾದೆಲ್ಲಾ ನಮ್ಮೂರು ನಮ್ಮ ಬದುಕಿನ್ಯಾಗಿನ್ನು ಐತಲಾ ಅಂತ ಆಶ್ಚರ್ಯ ಆಯ್ತು. ಅಷ್ಟರೊಳಾಗ ಆಫಿಸ್ ರೂಮ್‌ನಿಂದ ಹೊರಾಗ್ ಬಂದ ಸರ್ ಅಲಮ್ಮಾ ಒಂದಷ್ಟು ಹುಡುಗ್ಯಾರ್ನ ಕರಕಂಬಾ ಊಟಕ್ಕಿಡಬೊಕು ಅಂದಾಗ ನಾನು ಗೌರಿ ಆಫಿಸ್‌ಗೆ ಹೋದ್ವಿ. ಅಲ್ಲಿದ್ದ ಸರಸ್ವತಿ ಟೀಚರ್ ನಮ್ಮನ್ನ ನೋಡಿ ಮುಗುಳ್ನಕ್ಕು. ಆ ಆಫೀಸ್ ಗೋಡಿಮೇಲೆ ಬರದಿದ್ದ ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಅನ್ನೊ ಗಾದೆಯ ಮೇಲಿನ ಬಣ್ಣ ಮಾಸಿಹೋಗಿತ್ತು!

– **ಸುವರ್ಣ** ಚೆಳ್ಳೂರು

# ಕೋಲಾರದಲ್ಲಿ ದೇಶದ ಮೊದಲ ಹೆಲಿಕಾಪ್ಟರ್ ಘಟಕ

## ವರ್ಚುವಲ್ ಮೂಲಕ ಪ್ರಧಾನಿ ನರೇಂದ್ರ ಮೋದಿ, ಫ್ರಾನ್ಸ್ ಅಧ್ಯಕ್ಷ ಲೋಕಾರ್ಪಣೆ

• ಪ್ರಜೋದಯ ವರದಿ

**ಬೆಂಗಳೂರು:** ಕೋಲಾರ ತಾಲ್ಲೂಕಿನ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯಾರಂಭ ಮಾಡಲಿರುವ ಟಾಟಾ ಏರ್‌ಬಸ್ ಮಿನಿ ಹೆಲಿಕಾಪ್ಟರ್ ಅಂತಿಮ ಜೋಡಣಾ ಘಟಕವನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಮಹಾರಾಷ್ಟ್ರದ ಲೋಕಭವನದಿಂದ ವರ್ಚುವಲ್ ಮೂಲಕ ಲೋಕಾರ್ಪಣೆಗೊಳಿಸಿದರು.

ಭಾರತದ ಮೊದಲ ಖಾಸಗಿ ಹೆಲಿಕಾಪ್ಟರ್ ತಯಾರಿಕಾ ಘಟಕ ಇದಾಗಿದ್ದು, 2027ರಲ್ಲಿ ಮೊದಲ ಹೆಲಿಕಾಪ್ಟರ್ ಇಲ್ಲಿ ಸಿದ್ಧಗೊಳ್ಳುವ ನಿರೀಕ್ಷೆ ಇದೆ. ಈ ಸಂದರ್ಭದಲ್ಲಿ ವೇಮಗಲ್ ಘಟಕದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಫ್ರಾನ್ಸ್ ರಕ್ಷಣಾ ಸಚಿವೆ ಕ್ಯಾಥರೀನ್ ವಾಟ್ರಿನ್, ರಾಜ್ಯದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್, ಕೇಂದ್ರ ವಿಮಾನಯಾನ ಸಚಿವ ಕೆ.ರಾಮಮೋಹನ ನಾಯ್ಡು, ಕೋಲಾರ ಸಂಸದ ಮಲ್ಲೇಶಬಾಬು ಉಪಸ್ಥಿತರಿದ್ದರು.

ಫ್ರಾನ್ಸ್, ಅಮೆರಿಕಾ, ಬ್ರೆಜಿಲ್ ನಂತರ ಭಾರತದಲ್ಲಿ ಜಗತ್ತಿನ ನಾಲ್ಕನೇ ಹೆಚ್-125 ಹೆಲಿಕಾಪ್ಟರ್ ತಯಾರಿಕೆ ಮತ್ತು ಅಂತಿಮ ಜೋಡಣೆ ಘಟಕ ಸ್ಥಾಪನೆಯಾಗಿದೆ. ಮೊದಲು ಇಲ್ಲಿ ವರ್ಷಕ್ಕೆ 10 ಹೆಲಿಕಾಪ್ಟರುಗಳನ್ನು ತಯಾರಿಸಲಾಗುತ್ತದೆ.



ಇಲ್ಲಿ ಏವಿಯಾನಿಕ್ಸ್, ಹೈಡ್ರಾಲಿಕ್ ಸರ್ಕ್ಯೂಟ್, ಬಿಡಿ ಭಾಗಗಳು, ಇಂಧನ ವ್ಯವಸ್ಥೆ ಮತ್ತು ಎಂಜಿನ್‌ಗಳ ತಯಾರಿಕೆ ಸೇರಿ ಹಲವು ಮಹತ್ವದ ಭಾಗಗಳನ್ನು ತಯಾರಿಸಲಾಗುತ್ತದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಾತನಾಡಿ, ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ ನಮ್ಮ ಆರ್ಥಿಕ ನೀತಿಯ ಮೂಲಾಧಾರಗಳಾಗಿವೆ. ಖಾಸಗಿ ವಲಯವು ರಕ್ಷಣಾ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳಲು ನಾವು ಅನೇಕ ಸುಧಾರಣೆಗಳನ್ನು ತಂದಿದ್ದೇವೆ. ಹಿಂದೆ ರಕ್ಷಣಾ ಉತ್ಪಾದನೆಯು ಕೇವಲ ಸಾರ್ವಜನಿಕ ವಲಯಕ್ಕೆ ಸೀಮಿತವಾಗಿತ್ತು. ಆದರೆ ಈಗ ಒಟ್ಟು ಉತ್ಪಾದನೆಯಲ್ಲಿ ಸುಮಾರು ಕಾಲು ಭಾಗದಷ್ಟು ಖಾಸಗಿ ವಲಯದಿಂದ ಬರುತ್ತಿದೆ. ನಮ್ಮ ರಕ್ಷಣಾ ರಫ್ತು ಕೂಡ ಗಣನೀಯವಾಗಿ ಹೆಚ್ಚಾಗಿದ್ದು, ಭಾರತವು ಇಂದು ವಿಶ್ವದ ಅಗ್ರ ರಫ್ತುದಾರರ ಪಟ್ಟಿಯಲ್ಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಚಿವ ಎಂ.ಬಿ.ಪಾಟೀಲ್ ಅವರು ಮಾತನಾಡಿ, ಮುಂದಿನ 20 ವರ್ಷಗಳಲ್ಲಿ ಹೆಚ್-125 ದರ್ಜೆಯ 500 ಲಘು ಹೆಲಿಕಾಪ್ಟರ್ ಸಿದ್ಧವಾಗಲಿವೆ. ಈ ಘಟಕವು ರಾಜ್ಯದಲ್ಲಿ ಕಾರ್ಯಾರಂಭ ಮಾಡುತ್ತಿರುವುದು ಐತಿಹಾಸಿಕ ಸಾಧನೆಯಾಗಿ ಚಿರಸ್ಥಾಯಿಯಾಗಿ ಉಳಿಯಲಿದೆ ಎಂದು ಹೇಳಿದರು.

ಈ ಘಟಕಕ್ಕೆ ನಾನು ಕೈಗಾರಿಕಾ ಸಚಿವನಾದ ಮೇಲೆ 17 ಎಕರೆ ಜಾಗ ಕೊಟ್ಟಿದ್ದು, ದಾಖಲೆ ಅವಧಿ ಅಂದರೆ ಒಂದೂವರೆ ವರ್ಷದಲ್ಲಿ ಉದ್ಘಾಟನೆ ಆಗುತ್ತಿರುವುದು ಸಂತಸದ ವಿಷಯ. ಯೋಜನೆಗೆ ತ್ವರಿತಗತಿಯಲ್ಲಿ ಅನುಮೋದನೆ, ಇಲಾಖೆಗಳ ನಡುವೆ ಅತ್ಯುತ್ತಮ ಸಮನ್ವಯ, ಮೂಲಸೌಕರ್ಯ ಸನ್ನದ್ಧತೆ ಮತ್ತು ಕೈಗಾರಿಕಾ ಪಾಲುದಾರರೊಂದಿಗೆ ಸಕ್ರಿಯ ಪಾಲ್ಗೊಳ್ಳುವಿಕೆಗಳಿಂದ ಈ ಚಾರಿತ್ರಿಕ ಯೋಜನೆ ಕ್ಷಿಪ್ರಗತಿಯಲ್ಲಿ ಅನುಷ್ಠಾನಗೊಂಡಿದೆ ಎಂದರು.

ಮೊದಲಿಗೆ ವರ್ಷಕ್ಕೆ 10 ಹೆಲಿಕಾಪ್ಟರ್ ತಯಾರಿಸಲಾಗುವುದು. ಮುಂದಿನ ಎರಡು ದಶಕಗಳಲ್ಲಿ 500 ಲಘು ಹೆಲಿಕಾಪ್ಟರ್ ಸಿದ್ಧವಾಗಲಿವೆ. ಇಲ್ಲಿ ಏವಿಯಾನಿಕ್ಸ್, ಹೈಡ್ರಾಲಿಕ್ ಸರ್ಕ್ಯೂಟ್, ಬಿಡಿಭಾಗಗಳು, ಇಂಧನ ವ್ಯವಸ್ಥೆ ಮತ್ತು ಎಂಜಿನ್ನುಗಳ ತಯಾರಿಕೆ ಸೇರಿ ಹಲವು ಮಹತ್ವದ ಚಟುವಟಿಕೆಗಳು ನಡೆಯಲಿವೆ. ಆಂಧ್ರಪ್ರದೇಶ, ಉತ್ತರಪ್ರದೇಶ ಮತ್ತು ಗುಜರಾತ್ ರಾಜ್ಯಗಳ ತೀವ್ರ ಸ್ಪರ್ಧೆಯನ್ನು ಎದುರಿಸಿ, ರಾಜ್ಯವು ಈ ಯೋಜನೆಯನ್ನು ಗೆದ್ದುಕೊಂಡಿರುವುದು ಹೆಮ್ಮೆಯ ಸಂಗತಿ ಎಂದು ಅವರು ಬಣ್ಣಿಸಿದ್ದಾರೆ.

ಏರ್ ಬಸ್ ಕಂಪನಿಯು ಜಾಗತಿಕ ಮಟ್ಟದಲ್ಲಿ ಏಕ ಎಂಜಿನ್ ಹೆಲಿಕಾಪ್ಟರ್‌ಗಳ ಕ್ಷೇತ್ರದಲ್ಲಿ 4,300 ಹೆಲಿಕಾಪ್ಟರುಗಳೊಂದಿಗೆ, ಮಾರುಕಟ್ಟೆಯಲ್ಲಿ ಶೇ.80ರಷ್ಟು ಪಾಲು ಹೊಂದಿದೆ. ಈ ಹೆಲಿಕಾಪ್ಟರ್‌ಗಳು ಇದುವರೆಗೂ 38 ಮಿಲಿಯನ್ ಗಂಟೆಗಳಷ್ಟು ಕಾಲ ಹಾರಾಟ ನಡೆಸಿ ದಾಖಲೆ ನಿರ್ಮಿಸಿವೆ. ರಾಜ್ಯದಲ್ಲಿ ಹೆಚ್-125 ದರ್ಜೆಯ ಹೆಲಿಕಾಪ್ಟರ್ ತಯಾರಿಕೆಗೆ ಬೇಕಾದ ವಿಶ್ವಾಸಾರ್ಹತೆ ಮತ್ತು ಇಂಜಿನೀಯರಿಂಗ್ ಪರಿಣತಿ ಇದೆ. ಈ ವಲಯದಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ನಿಕಟವಾಗಿ ಕೆಲಸ ಮಾಡುವ ಆಸಕ್ತಿ ಹೊಂದಿದೆ ಎಂದು ಹೇಳಿದರು.

### 1000 ಕೋ. ರೂ. ಹೂಡಿಕೆ ನಿರೀಕ್ಷೆ

ಈ ಕಾರ್ಯಕ್ರಮದಿಂದ 1000 ಕೋ.ರೂ. ಹೆಚ್ಚು ಹೂಡಿಕೆಯಾಗುವ ನಿರೀಕ್ಷೆ ಇದೆ. ಇದು ನಮ್ಮ ಯುವ ಪೀಳಿಗೆಗೆ ನೇರ ಮತ್ತು ಪರೋಕ್ಷವಾಗಿ ಉದ್ಯೋಗಾವಕಾಶಗಳನ್ನು ಒದಗಿಸಲಿದೆ. ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಅತ್ಯಂತ ವಿಶ್ವಾಸಾರ್ಹವೆಂದು ಹೆಸರು ವಾಸಿಯಾಗಿರುವ ಈ ಹೆಲಿಕಾಪ್ಟರ್‌ಗಳು ಈಗ ಭಾರತದಲ್ಲಿ ತಯಾರಾಗುತ್ತಿರುವುದು ಹೆಮ್ಮೆಯ ವಿಷಯ. ಟಾಟಾ ಮತ್ತು ಏರ್‌ಬಸ್ ಈಗಾಗಲೇ ಸಿ-295 ಸಾರಿಗೆ ವಿಮಾನ ಯೋಜನೆಯಲ್ಲಿ ಯಶಸ್ವಿಯಾಗಿ ಸಹಕರಿಸುತ್ತಿವೆ. ಭಾರತ ಮತ್ತು ಫ್ರಾನ್ಸ್ ನಡುವಿನ ಸಂಬಂಧಕ್ಕೆ ಯಾವುದೇ ಮಿತಿ ಇಲ್ಲವೆಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ತಿಳಿಸಿದ್ದಾರೆ.

## ಕಟ್ಟಿನಕೆರೆ ಮಾರುಕಟ್ಟೆ ಒತ್ತುವರಿ ತೆರವು

» ಮೊದಲನೇ ಪುಟದಿಂದ

ಪ್ರತಿರೋಧ ತೋರಲಿಲ್ಲ, ಮುಖ್ಯ ವಾಗಿ ಎರಡು ರಸ್ತೆಗಳಲ್ಲಿ ತೆರವು ಮಾಡಲಾಯಿತು. ಸಾರ್ವಜನಿಕ ಸಂಚಾರಕ್ಕೆ ತೊಂದರೆಯುಂಟು ಮಾಡಿದರೆ ಕಾರ್ಯಾಚರಣೆ ಅನಿವಾರ್ಯವಾಗಲಿದೆ ಎಂದು ಇಂಜಿನಿಯರ್ ಕವಿತಾ ಅವರು ಎಚ್ಚರಿಕೆ ನೀಡಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾಸನದ ಕಟ್ಟಿನಕೆರೆ ಮಾರುಕಟ್ಟೆ ಎಂದರೆ ಜಿಲ್ಲಾದ್ಯಂತ ಪ್ರಸಿದ್ಧಿ ಪಡೆದಿದೆ. ಇತ್ತೀಚೆಗೆ ಇಲ್ಲಿ ಓಡಾಡಲು ಆಗದಷ್ಟು ಸಮಸ್ಯೆ ಯಾಗುತ್ತಿದೆ. ರಸ್ತೆಗೆ ಅಂಗಡಿಗಳನ್ನು ಹಾಕಿಕೊಳ್ಳುತ್ತಿರುವುದರಿಂದ ಬೈಕ್, ಆಟೋ ಚಾಲಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಗ್ರಾಹಕರಿಗೂ ಮಾರುಕಟ್ಟೆಗೆ ಬರಲು ಸಾಧ್ಯವಾಗುತ್ತಿಲ್ಲ. ಒತ್ತುವರಿ ತೆರವು ಮಾಡಬೇಕೆಂದು 15 ದಿನಗಳ ಹಿಂದೆಯೇ ನೋಟೀಸ್ ನೀಡಲಾಗಿತ್ತು. ಸ್ಪಂದನೆ ಸಿಗದ ಹಿನ್ನಲೆಯಲ್ಲಿ ಕಾರ್ಯಾಚರಣೆ ಕೈಗೊಳ್ಳಲಾಯಿತು ಎಂದರು.

## ದುದ್ದ ಹೋಬಳಿ ಗಾಂಧಿ ನಗರದಲ್ಲಿ ಕುಡಿಯುವ ನೀರಿಗೆ ತತ್ವಾರ

» ಮೊದಲನೇ ಪುಟದಿಂದ

ಕೂಲಿ ಕೆಲಸ ನಂಬಿಕೊಂಡಿದ್ದೇವೆ. ಅನಿವಾರ್ಯವಾಗಿ ಈ ನೀರನ್ನೇ ಕುಡಿಯುವಂತಾಗಿದೆ. ಮಕ್ಕಳು, ಮಹಿಳೆಯರು ಈಗಾಗಲೇ ಅನಾರೋಗ್ಯಕ್ಕೀಡಾಗಿ ಹಾಸಿಗೆ ಹಿಡಿದಿದ್ದಾರೆ. ಊರಿಗೆ ಊರೇ ಆರೋಗ್ಯ ಸಮಸ್ಯೆಯಿಂದ ಬಳಲುವ ಮೊದಲು ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತು ಶುದ್ಧ ಕುಡಿಯುವ ನೀರು ಕಲ್ಪಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದರು.

ನೀರುಗಂಟಿ ತಮಗೆ ಬೇಕಾದ ಸಮಯದಲ್ಲಿ ನೀರು ಬಿಡುತ್ತಾರೆ. ನಿವಾಸಿಗಳು ನೀರಿಗಾಗಿ ಕೆಲಸ ಬಿಟ್ಟು ಕಾಯುವಂತಾಗಿದೆ. ಕೂಲಿಗೆ ಹೋಗದಿದ್ದರೆ ಸಂಸಾರ ನಡೆಸುವುದು ಕಷ್ಟವಾಗುತ್ತದೆ. ಮೊದಲಿನಂತೆ ನಿಗದಿತ ಸಮಯಕ್ಕೆ ನೀರು ಕಲ್ಪಿಸಬೇಕು. ಜಿಲ್ಲಾಡಳಿತ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಇಲ್ಲವಾದರೆ ಹೋರಾಟ ತೀವ್ರಗೊಳಿಸಲಾಗುವುದೆಂದು ಎಚ್ಚರಿಕೆ ನೀಡಿದರು.

## ಪಾಲಿಕೆ ವಾರ್ಡ್ ಮರು ವಿಂಗಡಣೆ ಅವೈಜ್ಞಾನಿಕ

» ಮೊದಲನೇ ಪುಟದಿಂದ

ಬೇಕಾದರೆ ವಾರ್ಡ್‌ಗಳನ್ನು ಮತ್ತಷ್ಟು ಹೆಚ್ಚಳ ಮಾಡಬಹುದಿತ್ತು. ಒಂದು ವಾರ್ಡ್‌ನಲ್ಲಿ ಕಡಿಮೆ, ಮತ್ತೊಂದು ವಾರ್ಡ್‌ನಲ್ಲಿ ಹೆಚ್ಚು ಮತದಾರರನ್ನು ಸೇರಿಸುವ ಬದಲು ಸಮನಾಗಿ 5 ರಿಂದ 6 ಸಾವಿರ ಮತದಾರರನ್ನು ಸಮನಾಗಿ ಹಂಚಿಕೆ ಮಾಡಿದರೆ ಒಳಿತು. ಈ ಬಗ್ಗೆ ಸರ್ಕಾರ ಗಮನ ಹರಿಸಿ ಮರು ಪರಿಶೀಲನೆ ಮಾಡಬೇಕು. ಮಾತ್ರವಲ್ಲದೆ ಚುನಾವಣಾ ಆಯೋಗ ಹಾಗು ಸ್ಥಳೀಯ ಸಂಸದರೂ ಗಮನ ಹರಿಸಬೇಕು. ಮಾಡಲಾಗದಿದ್ದರೆ ಮೊದಲಿನಂತೆಯೇ ಉಳಿಸಲಿ. ಸಂಬಂಧಪಟ್ಟವರು ನಮಗೆ ಆಗಿರುವ ಅನ್ಯಾಯ ಸರಿಪಡಿಸಬೇಕು. ಸರಿಪಡಿಸದಿದ್ದರೆ ನಾವೆಲ್ಲರೂ ನ್ಯಾಯಾಲಯದ ಮೊರೆ ಹೋಗುತ್ತೇವೆಂದು ಎಚ್ಚರಿಸಿದರು. ಮಾಜಿ ಸದಸ್ಯರಾದ ಸಮೀರ್ ಖಾನ್, ರಫೀಕ್, ಅಕ್ಮಲ್, ಮದನ್, ಇಮ್ರಾನ್ ಇದ್ದರು.

## ಹಿಮೋಫಿಲಿಯಾ ಬಗ್ಗೆ ಜಾಗ್ರತೆ ವಹಿಸಿ: ಡಾ.ಸುರೇಶ್

• ಪ್ರಜೋದಯ ವರದಿ

**ಹಾಸನ:** ಮಕ್ಕಳಲ್ಲಿ ರಕ್ತಸ್ರಾವ, ಕೀಲುಗಳಲ್ಲಿ ಊತ, ದೇಹದಲ್ಲಿ ಅಸಾಮಾನ್ಯ ನೀಲಿ ಗುರು ತುಗಳು ಕಂಡುಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ ರಕ್ತ ಪರೀಕ್ಷೆ ಮಾಡಿಸಬೇಕು. ಸರಿಯಾದ ಸಮಯದಲ್ಲಿ ಚಿಕಿತ್ಸೆ ದೊರೆತರೆ ಹಿಮೋಫಿಲಿಯಾ (ಕುಸುಮ ರೋಗ) ನಿಯಂತ್ರಣದಲ್ಲಿಟ್ಟು ಕೊಂಡು ಸಾಮಾನ್ಯ ಜೀವನ ನಡೆಸಬಹುದೆಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ.ಸುರೇಶ್ ಹನಗವಾಡಿ ಅವರು ತಿಳಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಮೋಫಿಲಿಯಾ (ಕುಸುಮ ರೋಗ) ಎಂಬ ಅನುವಂಶಿಕ ರಕ್ತ ಸ್ರಾವ ಕಾಯಿಲೆಯಾಗಿದೆ. ಸಣ್ಣ ಗಾಯಕ್ಕೂ ಅತಿಯಾದ ರಕ್ತಸ್ರಾವ, ಮಕ್ಕಳಲ್ಲಿ ಅನಿರೀಕ್ಷಿತ ನೀಲಿ ಗುರುತು ಗಳು, ದೇಹದ ಒಳ ಭಾಗದಲ್ಲಿ ರಕ್ತ ಗುಳ್ಳೆಗಳಿರುವಂತಹ ಲಕ್ಷಣಗಳು ಕಂಡುಬಂದರೆ ತಕ್ಷಣ ರಕ್ತಪರೀಕ್ಷೆ ಮಾಡಿಸ ಬೇಕು. ವೈದ್ಯರ ಸಲಹೆ ಯಂತೆ ಕ್ಲಾಟಿಂಗ್ ಫ್ಯಾಕ್ಟರ್ ಚಿಕಿತ್ಸೆ ಪಡೆಯುವುದರಿಂದ ರೋಗ ನಿಯಂತ್ರಣ ಮಾಡಬಹುದೆಂದು ಹೇಳಿದರು.

ರೋಗವನ್ನು ಮರೆ ಮಾಚುವುದು ಅಥವಾ ಅಜಾಗರೂಕತೆ ತೋರಿಸುವುದು ಅಪಾಯಕಾರಿ. ಹಿಮೋ





ಫಿಲಿಯಾ ರೋಗದಲ್ಲಿ ರಕ್ತ ಹೆಪ್ಪುಗಟ್ಟುವ ಅಂಶಗಳು (ಕ್ಲಾಟಿಂಗ್ ಫ್ಯಾಕ್ಟರ್)ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ಸಣ್ಣ ಗಾಯವೂ ಗಂಭೀರ ರಕ್ತಸ್ರಾವಕ್ಕೆ ಕಾರಣವಾಗುತ್ತದೆ. ಕೀಲುಗಳಲ್ಲಿ ಆಂತರಿಕ ರಕ್ತಸ್ರಾವ ಉಂಟಾಗಿ ಶಾಶ್ವತ ಅಂಗವೈಕಲ್ಯಕ್ಕೂ ದಾರಿ ಮಾಡಿಕೊಡುತ್ತದೆ. ಹತ್ತು ಸಾವಿರ ಜನರಲ್ಲಿ ಒಬ್ಬರಿಗೆ ಕಂಡು ಬರುವ ಈ ಕಾಯಿಲೆ ಬಗ್ಗೆ ಗ್ರಾಮೀಣ ಭಾಗಗಳಲ್ಲಿ ಇನ್ನೂ ಸಾಕಷ್ಟು ಅರಿವು ಇಲ್ಲ ಎಂದು ಹೇಳಿದರು.

ತವರು ಚಾರಿಟಬಲ್ ಟ್ರಸ್ಟ್ ಹಾಗೂ ಮಕ್ಕಳ ತಜ್ಞ ಡಾ.ಹೆಚ್.ಕೆ.ಪಾಲಾಕ್ಷ ಅವರು ಮಾತನಾಡಿ, ದಾವಣಗೆರೆಯ ನಿಜಲಿಂಗಪ್ಪ ಬಡಾವಣೆಯಲ್ಲಿ ಕರ್ನಾಟಕ ಹಿಮೋಫಿಲಿಯಾ ಸೊಸೈಟಿ ಸ್ಥಾಪಿಸಿ, ರೋಗಿಗಳಿಗೆ ಸಕಾಲಿಕ ರಕ್ತಪರೀಕ್ಷೆ, ಫ್ಯಾಕ್ಟರ್ ಔಷಧಿ ಪೂರೈಕೆ, ಮಾರ್ಗದರ್ಶನ ಹಾಗು ಮಾನಸಿಕ ಬೆಂಬಲ ಒದಗಿಸುತ್ತಿದ್ದಾರೆ. ದುಬಾರಿ ವೆಚ್ಚದ ಚಿಕಿತ್ಸೆ ಸಾಮಾನ್ಯ ಕುಟುಂಬ ಗಳಿಗೆ ಭಾರವಾಗಿದ್ದ ಸಂದರ್ಭದಲ್ಲಿ, ಸರ್ಕಾರದಿಂದ ಉಚಿತವಾಗಿ ಫ್ಯಾಕ್ಟರ್ ಔಷಧಿ ದೊರಕು ವಂತೆ ಮಾಡುವಲ್ಲಿ ಅವರು ಮಹತ್ವದ ಪಾತ್ರವಹಿಸಿದ್ದಾರೆ.

ಜೆಜೆಎಂ ವೈದ್ಯಕೀಯ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುವ ಅವರು 45 ವರ್ಷಗಳಿಂದ ಹಿಮೋಫಿಲಿಯಾ ಕುರಿತು ಅಧ್ಯಯನ ನಡೆಸಿ, ದೇಶ-ವಿದೇಶಗಳಲ್ಲಿ ಜಾಗೃತಿ ಮೂಡಿಸಿದ್ದಾರೆ. ಅನ್ಯ ರಾಜ್ಯಗಳಿಂದಲೂ ರೋಗಿಗಳು ದಾವಣಗೆರೆಗೆ ಬಂದು ಚಿಕಿತ್ಸೆ ಪಡೆಯುತ್ತಿದ್ದಾರೆ. ಅದಕ್ಕೂ ಮೊದಲು ಕೇಂದ್ರ ಸರ್ಕಾರದ ಶ್ರೇಷ್ಠ ದಿವ್ಯಾಂಗ ಜನ ರಾಷ್ಟ್ರೀಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಗೌರವ ಅವರಿಗೆ ಸಂದಿವೆ ಎಂದು ಹೇಳಿದರು.

ಹಿಮೋಫಿಲಿಯಾ ಕಾಯಿಲೆ ವಿರುದ್ಧ ನಾಲ್ಕು ದಶಕಗಳಿಗೂ ಅಧಿಕ ಕಾಲ ಹೋರಾಟ ನಡೆಸಿ ರುವ ಡಾ. ಸುರೇಶ್ ಹನಗವಾಡಿ ಅವರಿಗೆ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ಲಭಿಸಿರುವುದು ಹೆಮ್ಮೆಯ ಸಂಗತಿ. ಸ್ವತಃ ಹಿಮೋಫಿಲಿಯಾ ಪೀಡಿತರಾಗಿದ್ದರೂ, ತಮ್ಮ ನೋವನ್ನು ಸಮಾಜ ಸೇವೆಯಾಗಿ ಮುಡುಪಾಗಿಟ್ಟಿರುವ ಅವರು ಸಾವಿರಾರು ರೋಗಿಗಳ ಬದುಕಿಗೆ ಬೆಳಕು ತಂದಿದ್ದಾರೆ ಎಂದರು.

## ಇರಾನ್ ಟ್ಯಾಂಕರ್ ಹಡಗು ವಶಪಡಿಸಿಕೊಂಡ ಭಾರತ



• ಪ್ರಜೋದಯ ವರದಿ

**ನವದೆಹಲಿ:** ಅಮೇರಿಕದಿಂದ ನಿರ್ಬಂಧ ಕ್ಕೊಳಗಾಗಿರುವ ಇರಾನ್‌ನ ಟ್ಯಾಂಕರ್ ಹಡಗು ಗಳನ್ನು ಭಾರತದ ಕಡಲ ವಲಯದಲ್ಲಿ ವಶಪಡಿಸಿಕೊಳ್ಳಲಾಗಿದೆಯೆಂದು ವರದಿಯಾಗಿದೆ.

ಭಾರತ ಮತ್ತು ಅಮೇರಿಕ ನಡುವಿನ ಮುಕ್ತ ವ್ಯಾಪಾರ ಒಪ್ಪಂದದ ನಂತರ, ಭಾರತದ ಕಡಲ ವಲಯದಲ್ಲಿ ಅಕ್ರಮ ವ್ಯಾಪಾರವನ್ನು ತಡೆಯಲು ಭಾರೀ ಭದ್ರತೆಯನ್ನು ಕೈಗೊಳ್ಳಲಾಗಿದೆ. ಭಾರತೀಯ ಕಡಲ ರಕ್ಷಣಾ ಪಡೆಯು 55 ಹಡಗು,10 ರಿಂದ 12 ವಿಮಾನಗಳನ್ನು ಕಣ್ಗಾವಲಿಗೆ ಬಳಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚೆಗೆ ಅಮೇರಿಕವು ಭಾರತದಿಂದ ರಫ್ತಾಗುವ ವಸ್ತುಗಳ ಮೇಲಿನ ಸುಂಕವನ್ನು ಶೇ.50ರಿಂದ ಶೇ.18ಕ್ಕೆ ಇಳಿಸಿತ್ತು. ಮುಂಬೈನಿಂದ ನೂರು ನಾಟಿಕಲ್ ಮೈಲಿ ದೂರದಲ್ಲಿ ಭಾರತದ ಕಡಲ ವಲಯದೊಳಗೆ ಅನುಮಾನಸ್ಪದ ಘಟನೆಯ ಹಿನ್ನಲೆಯಲ್ಲಿ ಟ್ಯಾಂಕರ್ ಹಡಗುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಫೆ.6 ರಂದು ಭಾರತೀಯ ಅಧಿಕಾರಿಗಳು ಪೋಸ್ಟ್ ಮಾಡಿದ್ದರು. ಆದರೆ, ನಂತರ ಅದನ್ನು ಡಿಲೀಟ್ ಮಾಡಲಾಗಿತ್ತು. ಹೆಚ್ಚಿನ ತನಿಖೆಗಾಗಿ ಆ ಟ್ಯಾಂಕರ್ ಹಡಗುಗಳನ್ನು ವಶಪಡಿಸಿಕೊಂಡು, ಮುಂಬೈಗೆ ತರಲಾಗಿದೆ ಎಂದು ಮೂಲಗಳು ತಿಳಿಸಿವೆ. ಟ್ಯಾಂಕರ್ ಹಡಗುಗಳನ್ನು ಸ್ಟೆಲ್ಲರ್ ರೂಬಿ, ಆಸ್ಫಾಲ್ಟ್‌ಸ್ಟಾರ್ ಹಾಗು ಅಲ್ ಜಾಫ್ಜಿಯಾ ಎಂದು ಗುರುತಿಸಲಾಗಿದೆ. ಈ ಹಡಗುಗಳು ತಮ್ಮ ಗುರುತನ್ನು ಮರೆಮಾಚಿಕೊಂಡು, ಕಾನೂನುಗಳನ್ನು ಉಲ್ಲಂಘಿಸಿ ಕಡಲನ್ನು ಅಕ್ರಮ ಪ್ರವೇಶ ಮಾಡುವ ಪ್ರಯತ್ನ ಮಾಡುತ್ತಿದ್ದವೆಂದು ತಿಳಿದುಬಂದಿದೆ.

## ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿರುದ್ಧ ಲಂಚದ ಆರೋಪ

**ಮೈಸೂರು:** ಮುಡಾ ಅಕ್ರಮ ಮುಚ್ಚಿಹಾಕಲು ನನಗೆ ಆಮಿಷವೊಡ್ಡಿದ್ದರು ಎಂದು ಆರೋಪಿಸಿರುವ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.

ನನಗೆ ಹಣದ ಆಮಿಷವೊಡ್ಡಿ ಮುಡಾ ಹಗರಣವನ್ನು ಮುಚ್ಚಿಹಾಕುವ ಪ್ರಯತ್ನ ಮಾಡು ತ್ತಿದ್ದಾರೆ. ಮಾಜಿ ಮುಡಾ ಆಯುಕ್ತ ಡಿ.ಬಿ. ನಟೇಶ್ ಅವರು ನನ್ನನ್ನು ಸಂಪರ್ಕಿಸುವ ಪ್ರಯತ್ನ ಮಾಡಿದ್ದು, ಹಣದ ಆಮಿಷವೊಡ್ಡಿ ಹಗರಣ ಮುಚ್ಚಿಹಾಕಲು ಪ್ರಯತ್ನ ನಡೆಸಿದರೆಂದು ಆಡಿಯೋ ತುಣುಕೊಂದನ್ನು ಬಿಡುಗಡೆ ಮಾಡಿದ್ದಾರೆ.

ಮುಡಾ ನಿವೇಶನ ಹಂಚಿಕೆ ವೇಳೆ ನಿಯಮ ಗಾಳಿಗೆ ತೂರಿದ ಗಂಭೀರ ಆರೋಪ ಡಿ.ಬಿ. ನಟೇಶ್ ಮೇಲಿದ್ದು, ಸದ್ಯ ಅವರು ಲೋಕಾಯುಕ್ತ ಹಾಗು ಇಡಿ ತನಿಖೆ ಎದುರಿಸುತ್ತಿದ್ದಾರೆ. ಅವರು ಆಪ್ತರಿಗೆ ಕರೆ ಮಾಡಿ ಸ್ನೇಹಮಯಿ ಕೃಷ್ಣ ಅವರನ್ನು ಭೇಟಿ ಮಾಡಿಸಿ ಮಾತಾಡೋಣ ಎಂದಿದ್ದಾರಂತೆ. ನಟೇಶ್ ಅವರು ನನ್ನನ್ನು ಯಾಕೆ ನೋಡಬೇಕು, ನನ್ನ ಜೊತೆ ಎಂಥಾ ಮಾತು ಎಂದು ಸ್ನೇಹಮಯಿ ಪ್ರಶ್ನಿಸಿದ್ದಾರೆ.

## ಗುಡ್ಡಗಾಡು ಓಟ: ಕಲಾ ಕಾಲೇಜು ತಂಡ ಪ್ರಥಮ



**ಹಾಸನ:** ಹಾಸನ ವಿಶ್ವವಿದ್ಯಾಲಯದ ಅಂತರ ಕಾಲೇಜು ಪುರುಷರ ಮತ್ತು ಮಹಿಳೆಯರ ಗುಡ್ಡಗಾಡು ಓಟದ ಸ್ಪರ್ಧೆಯಲ್ಲಿ ನಗರದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು ಗೆಲುವು ಸಾಧಿಸಿದೆ.

ಪುರುಷರ ತಂಡವು ಸತತ 2ನೇ ಬಾರಿ ತಂಡ ಪ್ರಥಮ ಸ್ಥಾನ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದು, ಮಹಿಳೆಯರ ತಂಡವು ಕೂಡ ದ್ವಿತೀಯ ಸ್ಥಾನ ಗಳಿಸಿದೆ. ಪುರುಷರ ವಿಭಾಗದಲ್ಲಿ ಬಿ.ಕೆ.ಲಕ್ಷ್ಮಣ ತೃತೀಯ ಸ್ಥಾನ ಪಡೆದು ಹರಿಯಾಣದಲ್ಲಿ ನಡೆಯಲಿರುವ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟಕ್ಕೆ ಆಯ್ಕೆಯಾಗಿ ದ್ದಾರೆ.

ಪುರುಷರ ತಂಡದಲ್ಲಿ ಬಿ.ಕೆ.ಲಕ್ಷ್ಮಣ, ಬಿ.ಜೆ.ಹೇಮಂತ್ ಕುಮಾರ್, ಕೆ.ಎಸ್. ಶ್ರೀಜನ್, ಟಿ.ಎಸ್.ಜೀವನ್ ಕುಮಾರ್, ಎ.ಆರ್.ಪ್ರಶಾಂತ್ ಹಾಗು ಕೆ.ಎನ್.ರಕ್ಷಿತ್ ಗೌಡ ಭಾಗವಹಿಸಿದ್ದರು. ಮಹಿಳೆಯರ ತಂಡದಲ್ಲಿ ಜೆ.ಎಸ್.ಬಿಂದುಶ್ರೀ, ಜಿ.ಹೆಚ್. ಭಾವನಾ, ಸಿ.ಎಲ್.ತೇಜಸ್ವಿನಿ, ಕೆ.ವೈ.ಮಾನಸ, ಸಿ.ಡಿ.ಸಿಂಚನ ಮತ್ತು ಎಂ.ಎಲ್. ಮಮತಾ ಸ್ಪರ್ಧಿಸಿದ್ದರು. ವಿಜೇತ ವಿದ್ಯಾರ್ಥಿ ಗಳು ಹಾಗು ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೆ.ಜೆ.ಪವನ್ ಅವರನ್ನು ಪ್ರಾಂಶುಪಾಲ ಡಾ.ಇರ್ಷಾದ್, ಶೈಕ್ಷಣಿಕ ಡೀನ್ ಡಿ.ಎಸ್. ರಾಜು, ಪರೀಕ್ಷಾ ನಿಯಂತ್ರಕ ಡಾ.ಮುರಳೀಧರ ಅವರು ಅಭಿನಂದಿಸಿದ್ದಾರೆ.

## ಅರಸೀಕೆರೆ ಅಭಿವೃದ್ಧಿಗೆ ಶಿವಲಿಂಗೇಗೌಡ ಶ್ರಮ



• ಪ್ರಜೋದಯ ವರದಿ

**ಬಾಣಾವರ:** ಪ್ರತಿಯೊಂದು ಸಮುದಾಯಕ್ಕೂ ಸಮುದಾಯ ಭವನಗಳನ್ನು ನಿರ್ಮಿಸಿ ಕೊಡುವ ಮೂಲಕ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಸಮಾನತೆಯ ಸಂದೇಶ ನೀಡುತ್ತಿದ್ದಾರೆ. ಕೆರೆಗಳಿಗೆ ನೀರು ಹರಿಸುವ ಕಾರ್ಯದಿಂದ ಬರಗಾಲಕ್ಕೆ ಒಳಗಾಗಿದ್ದ ಅರಸೀಕೆರೆಯನ್ನು ಸಮೃದ್ಧಿಯ ನಾಡನ್ನಾಗಿ ರೂಪಿಸಿದ್ದಾರೆಂದು ಮುಸ್ಲಿಂ ಜಮಾತ್ ಕಮಿಟಿ ಅಧ್ಯಕ್ಷ ಸೈಯದ್ ರಹಿಂ ಅವರು ಹೇಳಿದರು.

ಸುನ್ನಿ ಮುಸ್ಲಿಂ ಜಮಾತ್ ಕಮಿಟಿ ಪದಾಧಿಕಾರಿಗಳು, ಮುಸ್ಲಿಂ ಮುಖಂಡರು ಶಾಸಕ ಕೆ.ಎಂ.ಶಿವಲಿಂಗೇಗೌಡ ಹಾಗು ನಗರಸಭೆ ಮಾಜಿ ಅಧ್ಯಕ್ಷ ಎಂ. ಸಮೀವುಲ್ಲಾ ಅವರ ಹುಟ್ಟುಹಬ್ಬ ಆಚರಿಸಿ ಮಾತನಾಡಿದ ಅವರು, ಅರಸೀಕೆರೆ ಕ್ಷೇತ್ರಕ್ಕೆ ಕೆ.ಎಂ.ಶಿವಲಿಂಗೇಗೌಡರು ಶಾಸಕರಾಗಿ ಆಯ್ಕೆಯಾದ ನಂತರ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಭರದಿಂದ ಸಾಗುತ್ತಿವೆ. ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಕ್ಷೇತ್ರವು ಉತ್ತಮ ಪ್ರಗತಿಯನ್ನು ಸಾಧಿಸುತ್ತಿದೆ. ದೇವರು ಅವರಿಗೆ ಇನ್ನಷ್ಟು ಅಧಿಕಾರ ನೀಡಿ ಸಚಿವ ಸ್ಥಾನವನ್ನು ಕರುಣಿಸಲಿ ಎಂದು ಆಶಿಸಿದರು.

ಸುನ್ನಿ ಮುಸ್ಲಿಂ ಜಮಾತ್ ಕಮಿಟಿಗೆ ಸತತವಾಗಿ 2ನೇ ಬಾರಿ ಅಧ್ಯಕ್ಷರಾಗಿ ಆಯ್ಕೆಯಾದ ಸೈಯದ್ ರಹಿಂ ಹಾಗು ಕಾರ್ಯದರ್ಶಿ ಶರ್ಫಾನ್ ಸೇರಿ ಪದಾಧಿಕಾರಿಗಳಾದ ಗೌಸ್ ಪೀರ್, ಸಮೀರ್, ಆದಿಲ್, ಪರ್ವೀಜ್, ವಸೀಮ್, ಇಮ್ರಾನ್, ಶಬ್ಬೀರ್ ಸೇರಿ ಎಲ್ಲಾ ಸದಸ್ಯರನ್ನು ಶಾಸಕ ಶಿವಲಿಂಗೇಗೌಡ ಅವರು ಅಭಿನಂದಿಸಿದರು.

ಮುಸ್ಲಿಂ ಜಮಾತ್ ಕಮಿಟಿ ಮಾಜಿ ಅಧ್ಯಕ್ಷ ಕೆ.ಸಿ.ಖಾದರ್ ಬಾಷಾ, ಮುಖಂಡರಾದ ಶಫಿ ಅಹಮದ್, ಮಹಮ್ಮದ್ ಇಲಿಯಾಜ್, ಆರಿಫ್ ಜಾನ್, ಮೊಹಮ್ಮದ್ ಇಮ್ರಾನ್ ದಸ್ತಗಿರ್ ಉಪಸ್ಥಿತರಿದ್ದರು.

## ರಾಹುಲ್ ಗಾಂಧಿ ವಿರುದ್ಧ ದಾಖಲಾಗಿದ್ದ ಕೇಸ್ ರದ್ದು

• ಪ್ರಜೋದಯ ವರದಿ

**ಬೆಂಗಳೂರು:** ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ವಿರುದ್ಧ ಅಪ ಪ್ರಚಾರಕ್ಕೆ ಸಂಬಂಧಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಕರ್ನಾಟಕ ಬಿಜೆಪಿ ದಾಖಲಿಸಿದ್ದ ಮಾನನಷ್ಟ ಮೊಕದ್ದಮೆಯನ್ನು ಹೈಕೋರ್ಟ್ ರದ್ದುಗೊಳಿಸಿದೆ.

ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನಿಲ್ ದತ್ ಯಾದವ್ ಅವರ ನ್ಯಾಯಪೀಠ, ರಾಹುಲ್ ಗಾಂಧಿ ವಿರುದ್ಧದ ಮಾನನಷ್ಟ ಮೊಕದ್ದಮೆಯನ್ನು ರದ್ದುಗೊಳಿಸಿ ಆದೇಶ ಹೊರಡಿ ಸಿದರು. ರಾಹುಲ್ ಗಾಂಧಿ ಅವರ ವಿರುದ್ಧದ ಪ್ರಕರಣದ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶರು, ಅವರ ವಿರುದ್ಧದ ವಿಚಾರಣೆಯನ್ನು ಮುಂದುವರಿಸುವುದು ಕಾನೂನು ಪ್ರಕ್ರಿಯೆಯ ದುರುಪಯೋಗವಾಗಿದೆ ಎಂದು ಹೇಳಿದರು.

2023ರ ಚುನಾವಣೆ ವೇಳೆ, ಬಿಜೆಪಿ ವಿರುದ್ಧ ಅಪಪ್ರಚಾರ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಕಾಂಗ್ರೆಸ್ ಪಕ್ಷದ ಜಾಹೀರಾತುಗಳು ಮತ್ತು ಪ್ರಚಾರ ಘೋಷಣೆಗಳಲ್ಲಿ ಅಂದಿನ ಬಿಜೆಪಿ ಸರ್ಕಾರದ ವಿರುದ್ಧ ಶೇ.40 ಕಮಿಷನ್ ಆರೋಪ ಮಾಡಲಾಗಿತ್ತು. ಕಾಮಗಾರಿ ನಿರ್ವಹಣೆಗಾಗಿ ಗುತ್ತಿಗೆದಾರರು ಮತ್ತು ಇತರರಿಂದ ಶೇ.40 ರಷ್ಟು ಲಂಚ ವಿಧಿಸುತ್ತಿದೆಯೆಂದು ಕಾಂಗ್ರೆಸ್ ಆರೋಪಿಸಿತ್ತು. ಅದರೊಂದಿಗೆ ಬಿಜೆಪಿ ಸರ್ಕಾರದ ಕರಪ್ಷನ್



ರೇಟ್ ಕಾರ್ಡ್ ಅನ್ನು ಕಾಂಗ್ರೆಸ್ ಬಿಡುಗಡೆ ಮಾಡಿತ್ತು. ಅದನ್ನು ರಾಹುಲ್ ಗಾಂಧಿ ಸಹ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದರು. ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಬಿಜೆಪಿ ನಾಯಕರು ಕೆಪಿಸಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ಸಮನ್ಸ್‌ಗೆ ಪ್ರತಿಕ್ರಿಯೆಯಾಗಿ ರಾಹುಲ್ ಗಾಂಧಿ 2024ರ ಜೂ.7ರಂದು ವಿಶೇಷ ನ್ಯಾಯಾಲಯದ ಮುಂದೆ ಹಾಜರಾಗಿದ್ದರು. ಅವರಿಗೆ ಜಾಮೀನು ನೀಡಲಾಗಿತ್ತು. ಇದು ಸರ್ಕಾರದ ವಿರುದ್ಧ ಟೀಕೆಯೇ ಹೊರತು, ಬಿಜೆಪಿ ವಿರುದ್ಧ ಅಲ್ಲ. ಸರ್ಕಾರದ ವಿರುದ್ಧ ಮಾಡುವ ಟೀಕೆಗಳು ಮಾನನಷ್ಟ ಮೊಕದ್ದಮೆ ಅಡಿಯಲ್ಲಿ ಬರುವುದಿಲ್ಲ. ಈ ಪ್ರಕರಣದಲ್ಲಿ ರಾಹುಲ್ ಗಾಂಧಿ ವಿರುದ್ಧದ ಕ್ರಮಗಳು ಕಾನೂನು ಪ್ರಕ್ರಿಯೆಯಸ್ಪಷ್ಟದುರುಪಯೋಗವಾಗಿದೆಯೆಂದು ಅವರ ಪರ ವಕೀಲರು ವಾದಿಸಿದ್ದರು.

## ರಾಹುಲ್ ಗಾಂಧಿಯ ಒಂದು ಕರೆಯಿಂದ ಸಿಎಂ ಸ್ಥಾನ ವಂಚಿತನಾದೆ

• ಪ್ರಜೋದಯ ವರದಿ

**ನವದೆಹಲಿ:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆ ಒಂದು ಕರೆ ನನ್ನನ್ನು ಮುಖ್ಯಮಂತ್ರಿ ಸ್ಥಾನದಿಂದ ದೂರ ಮಾಡಿತು ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಸ್ಮರಿಸಿದ್ದಾರೆ.

2014ರಲ್ಲಿ 58 ಕಾಂಗ್ರೆಸ್ ಶಾಸಕರು ನನ್ನನ್ನು ಬೆಂಬಲಿಸಿದ್ದರು. ಆಗಿನ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಸಹ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ಪಕ್ಷಕ್ಕೆ ದಿನಾಂಕ ನಿಗದಿಪಡಿಸಲು ಕೇಳಿಕೊಂಡಿದ್ದರು. ಆ ಸಮಯದಲ್ಲಿ ಅಮೇರಿಕ ಪ್ರವಾಸದಲ್ಲಿದ್ದ ರಾಹುಲ್ ಗಾಂಧಿ ಪಕ್ಷದ ನಾಯಕರಿಗೆ ಕರೆ ಮಾಡಿದ ಬೆನ್ನಲ್ಲೇ ಪರಿಸ್ಥಿತಿ ಬದಲಾಯಿತು ಎಂದಿದ್ದಾರೆ.

2011ರ ವಿಧಾನಸಭಾ ಚುನಾವಣೆಯ ನಂತರ ಅಸ್ಸಾಂನಲ್ಲಿ ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯ ಉಂಟಾಗಿತ್ತು. ಆಗ ಶಾಸಕರ ಒಂದು ಭಾಗವು ಆಗಿನ ಮುಖ್ಯಮಂತ್ರಿ ತರುಣ್ ಗೊಗೊಯ್ ಬದಲಿಗೆ ಹಿಮಂತ್ ಶರ್ಮಾ ಅವರನ್ನು



ಮುಖ್ಯಮಂತ್ರಿಯಾಗಿ ಬೆಂಬಲಿಸಿತು. ಆದರೆ, ರಾಹುಲ್ ಗಾಂಧಿಯಿಂದಾಗಿ ನಾನು ಸ್ಥಾನ ಕಳೆದುಕೊಳ್ಳಬೇಕಾಯಿತು ಎಂದರು.

2015ರಲ್ಲಿ ಶರ್ಮಾ ಪಕ್ಷವನ್ನು ತೊರೆದು ಬಿಜೆಪಿಗೆ ಸೇರಿದರು. ಅಲ್ಲದೆ 2016ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೊದಲ ಗೆಲುವನ್ನು ಖಚಿತಪಡಿಸಿಕೊಳ್ಳುವಲ್ಲಿ ಪ್ರಮುಖಪಾತ್ರ ವಹಿಸಿದರು. ಸೋನಿಯಾ ಗಾಂಧಿ ದಿನಾಂಕವನ್ನು ನಿಗದಿಪಡಿಸಲು ನನ್ನನ್ನು ಕೇಳಿದರು. ನಾನು 2014ರ ಜೂನ್‌ನಲ್ಲಿ ಕಾಮಾಕ್ಯ ದೇವಸ್ಥಾನದಲ್ಲಿ ನಡೆಯಲಿದ್ದ ಅಂಬುಬಾಚಿ ಮೇಳದ ನಂತರ ಪ್ರಮಾಣ ವಚನ ಸ್ವೀಕರಿಸುತ್ತೇನೆಂದು ಅವರಿಗೆ ಹೇಳಿದ್ದೆ. ಆದರೆ, ರಾಹುಲ್ ಗಾಂಧಿ ಕರೆ ಮಾಡಿದ ನಂತರ ಪರಿಸ್ಥಿತಿ ಬದಲಾಯಿತು. ಆಗ ನನಗೆ ತೀವ್ರ ಬೇಸರವಾಯಿತು. ಈಗ ಒಬ್ಬರ ಜೀವನದಲ್ಲಿ ಏನಾಗುತ್ತದೆಯೋ ಅದು ಒಳ್ಳೆಯದಕ್ಕಾಗಿ ಎಂದು ನಾನು ನಂಬುತ್ತೇನೆ. ನಾನು ಕಾಂಗ್ರೆಸ್‌ನಲ್ಲಿದ್ದರೆ ನನಗೆ ಸಿಗುವುದಕ್ಕಿಂತ ಹೆಚ್ಚಿನದನ್ನು ದೇವರು ನನಗೆ ನೀಡಿದ್ದಾನೆಂದು ಶರ್ಮಾ ಹೇಳಿದರು.

2021ರಲ್ಲಿ ಬಿಜೆಪಿಯಿಂದ ಮುಖ್ಯಮಂತ್ರಿಯಾದ ನಂತರ ಅಸ್ಸಾಂ ಮತ್ತು ಸನಾತನ ಧರ್ಮ ಎರಡಕ್ಕೂ ಪೂರ್ಣ ಹೃದಯದಿಂದ ಸೇವೆ ಸಲ್ಲಿಸುವ ಅವಕಾಶ ನನಗೆ ಸಿಕ್ಕಿತು. ನಾನು ಕಾಂಗ್ರೆಸ್‌ನಲ್ಲಿದ್ದರೆ ಅದು ಸಾಧ್ಯವಾಗುತ್ತಿರಲಿಲ್ಲ. ಎಂದಾದರೂ ಪುಸ್ತಕ ಬರೆದರೆ, ಈ ಘಟನೆಗಳ ಬಗ್ಗೆ ವಿವರಿಸುತ್ತೇನೆಂದು ಶರ್ಮಾ ಹೇಳಿದರು.

## ಗಾಂಜಾ ಸೇವನೆ: ಯುವಕನ ಬಂಧನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಗಾಂಜಾ ಸೇವಿಸಿ ಸಾರ್ವಜನಿಕ ರಸ್ತೆಯಲ್ಲಿ ಓಡಾಡುತ್ತಿದ್ದ ಯುವಕನನ್ನು ಶ್ರವಣಬೆಳಗೊಳ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ತಾಲ್ಲೂಕಿನ ಕೊತ್ತನಘಟ್ಟ ಗ್ರಾಮದ ಸುನಿಲ್ ಬಂಧಿತ ಆರೋಪಿ. ರಾತ್ರಿ 8ರ ಸಮಯದಲ್ಲಿ ಶ್ರವಣಬೆಳಗೊಳ ಪಿಎಸ್‌ಐ ನವೀನ್‌ಕುಮಾರ್ ಸಿಬ್ಬಂದಿಯೊಂದಿಗೆ ಸಂತೆಮೈದಾನದಲ್ಲಿ ಗಸ್ತು ತಿರುಗುತ್ತಿದ್ದಾಗ ಸಂಶಯ ಬಂದು ಸುನಿಲ್‌ನ್ನನು ವಿಚಾರಣೆಗೆ ಒಳಪಡಿಸಿದಾಗ ಗಾಂಜಾ ಸೇವಿಸಿರುವುದು ದೃಢಪಟ್ಟಿದೆ. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 34 ಗ್ರಾಂ ಚಿನ್ನಾಭರಣ, 1.40 ಲಕ್ಷ ರೂ. ನಗದು ಕಳವು

• ಪ್ರಜೋದಯ ವರದಿ

**ಬೇಲೂರು:** ಮನೆ ಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು 34 ಗ್ರಾಂ ತೂಕದ ಚಿನ್ನಾಭರಣ ಹಾಗು 1.40 ಲಕ್ಷ ರೂ. ನಗದು ಕಳವು ಮಾಡಿರುವ ಘಟನೆ ತಾಲ್ಲೂಕಿನ ಮತ್ತಾವರ ಗ್ರಾಮದಲ್ಲಿ ನಡೆದಿದೆ.

ಗಿರಿಜಮ್ಮ ಎಂಬುವವರು ಫೆ.12 ರಂದು ಕುಟುಂಬ ಸಮೇತ ಅವರು ಮನೆಗೆ ಬೀಗ ಹಾಕಿ ತಮ್ಮ ಮಗಳ ಮನೆಗೆ ತೆರಳಿದ್ದರು. ಮೂರು ದಿನಗಳ ಬಳಿಕ ಬಂದು ನೋಡಿದಾಗ ಮನೆ ಬೀಗ ಒಡೆದಿರುವುದು ಗೊತ್ತಾಗಿದೆ. ಬಲವಾದ ಆಯುಧದಿಂದ ಬೀಗ ಮುರಿದು ಪ್ರವೇಶಿಸಿರುವ ಕಳ್ಳರು ಗಾಡ್ರೇಜ್ ಬೀರುವಿನಲ್ಲಿಟ್ಟಿದ್ದ ಚಿನ್ನಾಭರಣ ಹಾಗು ನಗದು ಕದ್ದಿದ್ದಾರೆ. ಅರೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಟಿ-20 ವಿಶ್ವಕಪ್: ಸೂಪರ್ 8ರ ಹಂತಕ್ಕೆ ಜಿಂಬಾಂಬ್ವೆ

### ಮಳೆಯಿಂದ ಪಂದ್ಯ ರದ್ದು | ಆಸ್ಟ್ರೇಲಿಯಾ ಹೊರಕ್ಕೆ

• ಪ್ರಜೋದಯ ವರದಿ

**ಪಲ್ಲಕೆಲೆ:** ಇಲ್ಲಿ ನಡೆಯಬೇಕಿದ್ದ ಟಿ-20 ವಿಶ್ವಕಪ್‌ನ ಸಿ ಗುಂಪಿನ ಐರ್ಲೆಂಡ್ ಹಾಗೂ ಜಿಂಬಾಂಬ್ವೆ ತಂಡಗಳ ನಡುವಿನ ಪಂದ್ಯವು ಮಳೆಯಿಂದಾಗಿ ಒಂದೂ ಎಸೆತವನ್ನೂ ಕಾಣದೆ ರದ್ದಾಗಿದ್ದು, ಉಭಯ ತಂಡಗಳಿಗೆ ತಲಾ ಒಂದೊಂದು ಅಂಕವನ್ನು ಹಂಚಿಕೊಂಡವು.

ಬಲಿಷ್ಠ ಆಸ್ಟ್ರೇಲಿಯಾ ಹಾಗೂ ಓಮಾನ್ ತಂಡಗಳ ವಿರುದ್ಧ ಗೆಲುವು ಸಾಧಿಸಿದ್ದ ಜಿಂಬಾಂಬ್ವೆ ತಂಡ ಸಿ ಗುಂಪಿನಲ್ಲಿ 4 ಅಂಕ ಪಡೆದು 2ನೇ ಸ್ಥಾನದಲ್ಲಿತ್ತು. ಉಳಿದ 2 ಪಂದ್ಯಗಳಿಂದ ಒಂದನ್ನು ಗೆದ್ದರೂ ಅಥವಾ ಒಂದು ಪಂದ್ಯ ರದ್ದಾಗಿ ಒಂದು ಅಂಕ ಸಿಕ್ಕರೂ ಜಿಂಬಾಂಬ್ವೆ ತಂಡ ಸೂಪರ್ 8 ಹಂತವನ್ನು ತಲುಪಲಿತ್ತು. ಅದೃಷ್ಟವಶಾತ್ ಐರ್ಲೆಂಡ್ ಎದುರಿನ ಪಂದ್ಯ ಮಳೆಯಿಂದಾಗಿ ರದ್ದಾಗಿದ್ದು, 5 ಅಂಕಗಳೊಂದಿಗೆ ಸೂಪರ್ 8ರ ಹಂತವನ್ನು ಪ್ರವೇಶಿಸಿದೆ.



**ಆಸ್ಟ್ರೇಲಿಯಾಗೆ ಆಘಾತ**

ವಿಶ್ವ ಕ್ರಿಕೆಟ್‌ನ ಬಲಿಷ್ಠ ತಂಡಗಳಲ್ಲಿ ಒಂದಾಗಿರುವ ಆಸ್ಟ್ರೇಲಿಯಾ ಕ್ರಿಕೆಟ್ ತಂಡವು ಈ ಬಾರಿಯ ಟೂರ್ನಿ ಆರಂಭಕ್ಕೂ ಮೊದಲು ಗಾಯದ ಸಮಸ್ಯೆ ಕಾಂಗರೂಗಳ ತಂಡವನ್ನು ಕಾಡಿತ್ತು. ಟೂರ್ನಿ ಆರಂಭಕ್ಕೂ ಮೊದಲು ಪ್ರಮುಖ ವೇಗಿ ಜೋಶ್ ಹ್ಯಾಜಲ್‌ವುಡ್ ಹೊರ ಬಿದ್ದಿದ್ದರು. ಟೂರ್ನಿಯ ಮೊದಲ ಪಂದ್ಯಕ್ಕೂ ಮುನ್ನ ನಾಯಕ ಪ್ಯಾಟ್ ಕಮಿನ್ಸ್ ಕೂಡ ತಂಡ ದಿಂದ ಹೊರಬಿದ್ದಿದ್ದರು. ಅದಾಗ್ಯೂ, ಸಿ ಗುಂಪಿನಲ್ಲಿ ಬಲಿಷ್ಠ ತಂಡವಾಗಿದ್ದ ಆಸ್ಟ್ರೇಲಿಯಾ ಸೂಪರ್ 8ರ ಹಂತವನ್ನು ಪ್ರವೇಶಿಸಲಿದೆ ಎಂಬುದು ಕ್ರಿಕೆಟ್ ಪಂಡಿತರ ಲೆಕ್ಕಾಚಾರವಾಗಿತ್ತು.

ಆಸ್ಟ್ರೇಲಿಯಾ ತಂಡವು ಲೀಗ್ ಮಾದರಿಯಲ್ಲಿ ನೀರಸ ಪ್ರದರ್ಶನ ತೋರಿತು. ಜಿಂಬಾಂಬ್ವೆ ಹಾಗೂ ಶ್ರೀಲಂಕಾ ತಂಡಗಳ ಎದುರು ಸೋತು ಟೂರ್ನಿಯಿಂದಲೇಹೊರಬಿದ್ದಿದೆ. ಆಸ್ಟ್ರೇಲಿಯಾ ತಂಡಕ್ಕೆ ಲೀಗ್ ಹಂತದಲ್ಲಿ ಓಮಾನ್ ವಿರುದ್ಧದ ಪಂದ್ಯ ಬಾಕಿ ಉಳಿದಿದ್ದು, ಪಂದ್ಯದ ಫಲಿತಾಂಶ ಏನೇ ಬಂದರು ಅಂಕಪಟ್ಟಿಯ ಮೇಲೆ ಯಾವುದೇ ಪರಿಣಾಮ ಉಂಟು ಮಾಡುವುದಿಲ್ಲ.

### ಪ್ರತಿಮೆ ಕಾಮಗಾರಿ ವೀಕ್ಷಿಸಿದ ಶಾಸಕ ಸಿ.ಎನ್.ಬಾಲಕೃಷ್ಣ

## ಅಂಬೇಡ್ಕರ್ ಪುತ್ಥಳಿ ಅನಾವರಣಕ್ಕೆ ಶೀಘ್ರ ದಿನಾಂಕ ನಿಗದಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಲೋಕಾರ್ಪಣೆಗೆ ಶೀಘ್ರದಲ್ಲೇ ಸೂಕ್ತವಾದ ದಿನಾಂಕವನ್ನು ನಿಗದಿಪಡಿಸಲಾಗುವುದೆಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ತಾಲ್ಲೂಕು ಕಚೇರಿ ಆವರಣದಲ್ಲಿ ನಿರ್ಮಿಸಲಾಗಿರುವ ಅಂಬೇಡ್ಕರ್ ಪ್ರತಿಮೆ ಕಾಮಗಾರಿ ವೀಕ್ಷಿಸಿ ಮಾತನಾಡಿದ ಅವರು, ಪ್ರತಿಮೆ ಅನಾವರಣಕ್ಕೆ ಜ.26ರಂದು ದಿನಾಂಕ ನಿಗದಿಯಾಗಿತ್ತು ಕಾರಣಾಂತರಗಳಿಂದ ದಿನಾಂಕವನ್ನು ಮುಂದೂಡಲಾಗಿದೆ ಎಂದರು.



ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪನವರು ಕಾರ್ಯಕ್ರಮದ ಸಲುವಾಗಿ ಹೊಳೆನರಸೀಪುರಕ್ಕೆ ತೆರಳುವ ಮಾರ್ಗ ಮಧ್ಯೆ ಪಟ್ಟಣಕ್ಕೆ ಭೇಟಿ ನೀಡಿ ಅಂಬೇಡ್ಕರ್ ಪ್ರತಿಮೆಯನ್ನು ವೀಕ್ಷಿಸಿ ಮುಖಂಡರೊಂದಿಗೆ ಚರ್ಚಿಸಿರುವುದು ಸ್ವಾಗತಾರ್ಹ. ಪ್ರತಿಮೆ ಅನಾವರಣಕ್ಕೆ ಸಂಬಂಧಿಸಿದಂತೆ ಹಲವಾರು ಬಾರಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರೊಂದಿಗೆ ಚರ್ಚಿಸಲಾಗಿದೆ ಎಂದು ತಿಳಿಸಿದರು.

ಪ್ರತಿಮೆ ಕೆಳಭಾಗದಲ್ಲಿ ಅಭಿವೃದ್ಧಿ ಕಾಮಗಾರಿಗಳು ಬಾಕಿ ಉಳಿದಿದ್ದು ಪ್ರತಿಮೆ ಮುಂಭಾಗ ಪ್ರತಿಮೆಗೆ ಅಡ್ಡವಾಗಿರುವ ಸಣ್ಣ ಮರಗಳನ್ನು ತೆರವುಗೊಳಿಸಲು ಮುಖಂಡರು ಮನವಿ ಮಾಡಿದ್ದು ಹಾಗೂ ಪ್ರತಿಮೆಗೆ ಮಾಲಾರ್ಪಣೆ ಮಾಡಲು ಸುತ್ತಲೂ ನಿರ್ಮಾಣ ಮಾಡಲಾಗಿರುವ ಗ್ರಿಲ್ ಅಡ್ಡಿಯಾಗುತ್ತಿರುವುದರಿಂದ ಸಣ್ಣಪುಟ್ಟ ಮಾರ್ಪಾಡು ಮಾಡಿ ಕಾಮಗಾರಿ ಪೂರ್ಣಗೊಳಿಸಲಾಗುವುದೆಂದು ಭರವಸೆ ನೀಡಿದರು.

ಸಚಿವರೊಂದಿಗೆ ಚರ್ಚಿಸಿ ಸೂಕ್ತವಾದ ದಿನಾಂಕವನ್ನು ನಿಗದಿಪಡಿಸಿ ಎಲ್ಲಾ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರೊಂದಿಗೆ ಚರ್ಚಿಸಿ ಅವರ ಸಲಹೆ ಪಡೆದು ಯಾವುದೇ ಲೋಪ ವಾಗದಂತೆ ಗೌರವಪೂರಕವಾಗಿ ಪ್ರತಿಮೆ ಅನಾವರಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಇದೇ ಆವರಣದ ಮತ್ತೊಂದು ಬದಿಯಲ್ಲಿ ಮಹಾತ್ಮ ಗಾಂಧಿಯವರ ಪುತ್ಥಳಿಯನ್ನು ನಿರ್ಮಿಸಲು ಉದ್ದೇಶಿಸಿದ್ದು ಅಡಿಪಾಯದ ನಕ್ಷೆ ಸಿದ್ಧವಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಲು ಸೂಚಿಸಲಾಗಿದ್ದು, ಶೀಘ್ರದಲ್ಲಿ ಕಾಮಗಾರಿ ಪ್ರಾರಂಭವಾಗಲಿದೆ. ಪುತ್ಥಳಿ ನಿರ್ಮಾಣವಾಗಿ ಪುತ್ಥಳಿ ಸ್ಥಾಪನೆ ಮಾಡಲು ಮೂರ್‍ನಾಲ್ಕು ತಿಂಗಳು ಕಾಲಾವಕಾಶದ ಅವಶ್ಯಕತೆ ಇದ್ದು, ಕಾಮಗಾರಿಗಳು ಮುಗಿದ ನಂತರ ಪುತ್ಥಳಿ ಅನಾವರಣಕ್ಕೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ವಳಗೇರಹಳ್ಳಿ ಪುಟ್ಟಸ್ವಾಮಿ, ಮಂಜುನಾಥ್, ಚಂದ್ರಪ್ಪ, ಮಂಜಣ್ಣ, ರವಿ, ಧರಣೇಶ್, ಲಕ್ಷ್ಮಣ್, ಟಿಎಪಿಸಿಎಂಎಸ್‌ನ ಅಧ್ಯಕ್ಷ ವೆಂಕಟೇಶಮೂರ್ತಿ, ನಿರ್ದೇಶಕ ಅನಿಲ್ ಮರಗೂರು, ತಹಶೀಲ್ದಾರ್.ಜಿ.ಎಸ್.ಶಂಕರಪ್ಪ, ಸಮಾಜ ಕಲ್ಯಾಣಾಧಿಕಾರಿ ಡಿ.ಆರ್.ತ್ಯಾಗರಾಜ್, ಪುರಸಭಾ ಮುಖ್ಯಾಧಿಕಾರಿ ಆರ್.ಯತೀಶ್ ಕುಮಾರ್ ಇತರರು ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK